1. ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ. ಎಸ್. ಈಶ್ವರಪ್ಪ (ಇಂಧನ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ದಿನಾಂಕ 21-7-08 ರಂದು 1ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 12 ಪ್ರಶ್ನೆಗಳ ಪೈಕಿ 07 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಈಗ ಮುಂದಿನ ವಿಷಯಕ್ಕೆ ಹೋಗುವುದಕ್ಕಿಂತ ಮೊದಲು ನಾನು ಹೇಳುವುದೇನೆಂದರೆ, ಇವತ್ತು ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಹುಟ್ಟುಹಬ್ಬ. ಈ ಸದನದ ಮುಖಾಂತರ ಎಲ್ಲರ ಪರವಾಗಿ ನಾನು ಅವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಅರ್ಪಿಸುತ್ತೇನೆ.

ಈಗ ಗಮನ ಸೆಳೆಯುವ ಸೂಚನೆಗಳು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ರಾಜ್ಯಕ್ಕೆ ಹೊರಗಡೆಯಿಂದ 1000 MW ವಿದ್ಯುತ್ತನ್ನು ಖರೀದಿ ಮಾಡುವ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಗಿಂತ ಮೊದಲು ಇಂಧನ ಸಚಿವರಾದ ಮಾನ್ಯ ಈಶ್ವರಪ್ಪನವರು ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಒಂದು ಹೇಳಿಕೆ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ unscheduled load shedding ಏನಾಗುತ್ತಿದೆ, ಇದನ್ನು ಸರಿಪಡಿಸಬೇಕಾದರೆ ಹೊರಗಡೆಯಿಂದ 1000 MW electricity ಅನ್ನು ಖರೀದಿ ಮಾಡುತ್ತೇವೆ ಮತ್ತು electricity ಯನ್ನು ಅತ್ಯಂತ ಕಡಿಮೆ ರೇಟ್‌ನಲ್ಲಿ ಮಾನ್ಯ ರಮಣ್‌ಸಿಂಗ್‌ರವರು ಕೊಡುತ್ತೇವೆಂದು ಹೇಳಿದ್ದಾರೆ ಎನ್ನುವುದನ್ನು ಪತ್ರಿಕೆಯಲ್ಲಿ ಬಂದಿರುವುದನ್ನು ನಾವು ಓದಿದ್ದೇವೆ. ಎರಡನೆಯದಾಗಿ, 1000 MW ವಿದ್ಯುತ್ ಉತ್ಪಾದನೆ ಘಟಕವನ್ನು ಕೂಡ ಅಲ್ಲಿಯೇ ಸ್ಥಾಪನೆ ಮಾಡುವುದಕ್ಕೆ ಅವರು ಒಪ್ಪಿದ್ದಾರೆ, ಅದೂ ಕೂಡ ನಮ್ಮ ಪರಿಶೀಲನೆಯಲ್ಲಿದೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಈಗ ಸದನ ನಡೆಯುತ್ತಿದೆ, ಸದನ ನಡೆಯುತ್ತಿರುವಾಗ ಇಂತಹ ಮಹತ್ವವಾದಂತಹ ಹೇಳಿಕೆಗಳನ್ನು ಸದನದ ಹೊರಗಡೆ ನೀಡುವುದು ಸಮಂಜಸವಲ್ಲ. ಇವತ್ತು 1,000 MW ಅಂದರೆ, ಇವತ್ತಿನ ಕಾಲದಲ್ಲಿ ಕನಿಷ್ಟಪಕ್ಷ ಒಂದು ಮೆಗಾವ್ಯಾಟ್ ಉತ್ಪಾದನೆಗೆ 4 ರಿಂದ 5 ಕೋಟಿ ರೂಪಾಯಿ ಆಗಬಹುದು. ಹಾಗಿದ್ದಾಗ 5,000 ಕೋಟಿ ರೂಪಾಯಿಯ ಬಜೆಟ್‌ನ್ನು ಹೊರಗಡೆ announce ಮಾಡಿ, ಅದರ ವಿಚಾರವಾಗಿ ನಾವು ನೋಡಿದ್ದೇವೆ, ಹೇಳಿದ್ದೇವೆಂದು ಅವರಿಗೆ ಮಾಹಿತಿ ಕೊಡುವುದಕ್ಕಿಂತಲೂ, ಸದನ ಇಲ್ಲಿ ನಡೆದಿದೆ, ನಡೆದಾಗ ಯಾವ ದಿಕ್ಕಿನಲ್ಲಿ ಮಾತು ಆಯಿತು? ಏನು ಕೊಡುತ್ತೇವೆಂದು ಹೇಳಿದರು? ನಿಜವಾಗಿಯೂ ನಿಮ್ಮ ಘಟಕವನ್ನು ಅಲ್ಲಿ ಸ್ಥಾಪನೆ ಮಾಡುತ್ತಿದ್ದೀರಾ? ವಿದ್ಯುತ್ ಖರೀದಿ ಮಾಡುತ್ತಿದ್ದೀರಾ? ಹಾಗೆ ಖರೀದಿ ಮಾಡಿದರೆ, ಅದರ ಬೆಲೆ ಈಗಿರುವಂತಹ price ಗಿಂತಲೂ ಕಡಿಮೆ ಇದೆಯಾ? ಎಲ್ಲಾ ವಿಚಾರವನ್ನು ಕೂಡ ನೀವು ಹೇಳಬೇಕಾಗಿದ್ದರೆ ಸದನವನ್ನು ವಿಶ್ವಾಸಕ್ಕೆ

ತೆಗೆದುಕೊಂಡು, ಸದನ ನಡೆಯುತ್ತಿರುವಾಗ ಸದಸ್ಯರಿಗೆ ತಿಳಿಸಿ ಆಮೇಲೆ ಅವರು ಹೊರಗಡೆ ಏನಾದರೂ ಹೇಳಿಕೊಳ್ಳಬಹುದು. ಆದರೆ ನಮಗೆ ಏನೂ ಗೊತ್ತಿಲ್ಲದೆ ಇದ್ದು, ಸದನದಲ್ಲಿ ಹೇಳುವುದಕ್ಕಿಂತ ಮೊದಲೇ ಹೊರಗಿನ ಜನರಿಗೆ statement ಹೇಳುವಂತಾದ್ದು, ಮಾಡತಕ್ಕಂಥಾದ್ದು ಎಷ್ಟರ ಮಟ್ಟಿಗೆ ಸರಿ? ಮತ್ತು ನಮಗೆ ಏನೂ ವಿಷಯ ಗೊತ್ತಿಲ್ಲ. ನಮಗೆ ಯಾವುದೋ ಒಂದಿಬ್ಬರು, ಮೂವರು TVಯವರು ಬಂದು reaction ಕೇಳಿದರು. 110 MW ವಿದ್ಯುತ್ ಅನ್ನು ಖರೀದಿ ಮಾಡುತ್ತೇವೆಂದು ಹೇಳುತ್ತಿದ್ದಾರೆ, ನಿಮ್ಮ Central Governmentನವರು 110 MW ವಿದ್ಯುತ್ ಅನ್ನು ಕೊಡುವುದಿಲ್ಲವೆಂದು ಹೇಳಿದ್ದಾರಂತೆ, ಅದಕ್ಕೆ ನೀವೇನು ಹೇಳುತ್ತೀರಿ ಎಂದು ಕೇಳಿದರು. ಅದರ ವಿಚಾರದಲ್ಲಿ ನಮಗೆ ಕೊಡುವುದೂ ಗೊತ್ತಿಲ್ಲ, ತೆಗೆದುಕೊಳ್ಳುವುದೂ ಗೊತ್ತಿಲ್ಲ, ನಿಲ್ಲಿಸಿದ್ದೂ ಗೊತ್ತಿಲ್ಲ. ಅವರೇ ಹೇಳಿಕೆಗಳನ್ನು ಹೇಳುತ್ತಾರೆ, ಅದಕ್ಕೆ ಅವರೇ ಸಮರ್ಥನೆ ಮಾಡಿಕೊಳ್ಳುತ್ತಾರೆ. ಆದುದರಿಂದ ಮಾನ್ಯ ಅಧ್ಯಕ್ಷರೇ, ಇಂತಹ ಮಹತ್ವವಾದ ಹೇಳಿಕೆಗಳನ್ನು ನಮ್ಮ Rules of Business Transaction ಪ್ರಕಾರ ಅಥವಾ House Rules ಪ್ರಕಾರ ಇಲ್ಲಿ annouce ಮಾಡಿ, ಅದರ ಬಗ್ಗೆ ಸಾಧಕ ಭಾದಕ ನೋಡಿಕೊಂಡು ಆಮೇಲೆ ಜನರಿಗೆ reaction ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಅದನ್ನು ಬಿಟ್ಟು ಹೊರಗಡೆ ಎಲ್ಲಾ ಹೇಳಿ, ಇಲ್ಲಿ ಬಂದು ಕೊನೆಗೆ ನಾವು ಕೇಳಿದಾಗ ಹೇಳುವುದು, ಇಲ್ಲವೆಂದರೆ ಅದೇ ರೀತಿಯಾಗಿ ನಡೆದುಕೊಂಡು ಹೋಗುವುದು. ಅಂದರೆ ಈ ಸದನ ಇದೆಯೋ, ಇಲ್ಲವೋ? ನಾವು ಅಸ್ತಿತ್ವದಲ್ಲಿ ಇದ್ದೇವೆಯೋ, ಇಲ್ಲವೋ? ಈ ಸದನದ ಸದಸ್ಯರ privilege ಏನಿದೆ ಎಂದರೆ ಮೊದಲು ನಮಗೆ ಸರ್ಕಾರದಿಂದ ಗೊತ್ತಾಗಬೇಕು ಎಂದು ಇದೆ. ಆ privilege ಗೆ ನೀವು ಧಕ್ಕೆ ತಂದರೆ ನಾವು ಯಾವ ರೀತಿಯಾಗಿ ಕೆಲಸ ಮಾಡುವುದು? ಆದುದರಿಂದ ದಯವಿಟ್ಟು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಇಲ್ಲವೆಂದರೆ ನೀವು ಅವರಿಗೆ ಹೇಳಬೇಕು. ಇಂತಹ ಹೇಳಿಕೆಗಳನ್ನು ನೀವು ಹೇಳುವುದು ಸರಿಯಲ್ಲ, ಇನ್ನು ಮುಂದೆ ಮೊದಲು ಸದನದಲ್ಲಿ ಹೇಳಿ ಎಂದು ಹೇಳುವುದರ ಮೂಲಕ ಅವರಿಗೆ ಚುರುಕು ಮುಟ್ಟಿಸಬೇಕು. ಇಲ್ಲದಿದ್ದರೆ ಅವರಿಗೆ ನಾವು ಹೇಳಿದ್ದೇ ಸರಿ, ನಾವು ಕೇಳಿದ್ದೇ ಸರಿ ಎನ್ನುವಂತಹ ಅಭಿಪ್ರಾಯ ಬರುತ್ತದೆ. ನಮಗೆ ಮಾಧ್ಯಮದ ಮುಂದೆ ನಮಗೆ ಏನೂ ಗೊತ್ತಿಲ್ಲ ಎನ್ನುವಂತಹ ವಿಚಾರ ಬರುತ್ತದೆ. ಆದುದರಿಂದ ದಯವಿಟ್ಟು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದಂತಹ ಹೇಳಿಕೆಯನ್ನು ಕೊಡಲಿ. ಏಕೆ ಈ ರೀತಿಯಾಗಿ ಮಾಡಿದರು? ಕಾರಣವೇನು? ಒತ್ತಡವೇನು? ಇಷ್ಟೊಂದು publicity ಕೊಟ್ಟು ಹೊರಗಡೆ ಹೇಳುವಂಥಾದ್ದು ಏನಿತ್ತು? ಅದರಿಂದ ನಮಗೆ ಏಕೆ ಅದರಿಂದ ವಂಚಿತರನ್ನಾಗಿ ಮಾಡಿದರು ಎಂದು ಕೇಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ (ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೆ, ಎಲ್ಲರಿಗೂ ಗೊತ್ತಿದೆ, ಕರ್ನಾಟಕ ರಾಜ್ಯದಲ್ಲಿ 1987 ರಿಂದೀಚೆಗೆ ಇಷ್ಟೊಂದು ವಿದ್ಯುತ್ ಕ್ಷಾಮ ಆಗಿರಲಿಲ್ಲ. ಇಂತಹ ಸಂದರ್ಭದಲ್ಲಿ ಎಲ್ಲೆಲ್ಲಿಂದ ವಿದ್ಯುತ್‌ನ್ನು ಜೋಡಿಸಬೇಕು ಎನ್ನುವ ಪ್ರಯತ್ನವನ್ನು ನಾವು ರಾಜ್ಯ ಸರ್ಕಾರದಿಂದ ಮಾಡುತ್ತಿದ್ದೇವೆ. ಛತ್ತೀಸ್‌ಘಡದ ಮುಖ್ಯಮಂತ್ರಿ ಡಾ|| ರಮಣ್‌ಸಿಂಗ್‌ರವರು ಜಿಂದಾಲ್ ಆಸ್ಪತ್ರೆಗೆ ಬಂದಿದ್ದಾರೆ. ಆ ಆಸ್ಪತ್ರೆಗೆ ಅವರು ಬಂದಂತಹ ಸಂದರ್ಭದಲ್ಲಿ ನಾನು ಹಾಗೂ ಮಾನ್ಯ ಮುಖ್ಯಮಂತ್ರಿಗಳು

ಹೋಗಿ ಭೇಟಿ ಮಾಡಿದ್ದೇವೆ. ಅವರನ್ನು ಭೇಟಿ ಮಾಡಿದಂತಹ ಸಂದರ್ಭದಲ್ಲಿ ನಾವು ಅವರಿಗೆ ಮನವಿ ಮಾಡಿ, ನೀವು ವಿದ್ಯುತ್ತನ್ನು ಮಧ್ಯಪ್ರದೇಶ ಹಾಗೂ ಬೇರೆ ಬೇರೆ ರಾಜ್ಯಗಳಿಗೆ ಕೊಡುತ್ತಿದ್ದೀರಿ ಎಂದು ಗೊತ್ತಾಗಿದೆ, ಕರ್ನಾಟಕದಲ್ಲಿ ಇಷ್ಟೊಂದು ವಿದ್ಯುತ್ ಕ್ಷಾಮ ಇರುವಂತಹ ಸಂದರ್ಭದಲ್ಲಿ ನಮಗೂ ಕೂಡ ಸಹಾಯ ಮಾಡಬೇಕು ಎನ್ನುವಂತಹ ಪ್ರಾರ್ಥನೆಯನ್ನು ಕೂಡ ಅವರಿಗೆ ಮಾಡಿದ್ದೇವೆ. ನಾವು ಬೇರೆ ಬೇರೆ ಕಡೆ ಎಲ್ಲಿ ಪ್ರಯತ್ನ ಮಾಡಿದೆವು, ಅದೇ ರೀತಿ ಪ್ರಯತ್ನ ಮಾಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಎಲ್ಲೂ ಕೂಡ ತೀರ್ಮಾನ ಆಗಿಹೋಗಿದೆ ಎನ್ನುವಂತಹ ಅಂಶ ಇಲ್ಲ, ಇನ್ನೂ ತೀರ್ಮಾನ ಕೂಡ ಆಗಿಲ್ಲ. ನಾನೂ ಮನವಿ ಮಾಡಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹೋಗಿ ಮನವಿ ಮಾಡಿದಂತಹ ಸಂದರ್ಭದಲ್ಲಿ, ನಮ್ಮ ಅಧಿಕಾರಿಗಳು ಕೂಡ ಛತ್ತೀಸ್‌ಘಡದ ವಿದ್ಯುತ್ ಇಲಾಖೆಯ ಅಧಿಕಾರಿಗಳ ಜೊತೆ ಮಾತುಕತೆ ಮಾಡಬೇಕು ಎಂದು ಹೇಳಿ ಮಾತುಕತೆ ಕೂಡ ನಡೆಯುತ್ತಿದೆ. ಆ ರೀತಿಯಾಗಿ ನಾವು ಮನವಿ ಮಾಡಿದ್ದೇವೆ ವಿನಹಾ ಇವತ್ತಿನವರೆಗೂ ಕೂಡ ತೀರ್ಮಾನ ಯಾವುದೂ ಆಗಿಲ್ಲ. ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿದ್ದಾರೆ, ಅವರ ಅಧಿಕಾರಿಗಳ ಜೊತೆ ಮಾತುಕತೆ ನಡೆದಿದೆ, ಎಲ್ಲಾ ಆಗಿದೆ. ಇಷ್ಟು ವಿದ್ಯುತ್ ಕ್ಷಾಮ ಇರುವಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಏನೇನು ಪ್ರಯತ್ನಗಳನ್ನು ಮಾಡಿದೆ ಎನ್ನುವಂತಹ ಅಂಶವನ್ನು ಪತ್ರಿಕೆಗಳು ಮತ್ತು ಟಿ.ವಿ.ಗಳ ಮುಖಾಂತರ ರಾಜ್ಯದ ಜನರಿಗೆ ವಿಚಾರವನ್ನು ತಿಳಿಸುತ್ತಿದ್ದೇವೆ. ಏಕೆಂದರೆ ರಾಜ್ಯದಲ್ಲಿ ವಿದ್ಯುತ್ ಕ್ಷಾಮ ಇರುವಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಏನು ಮಾಡುತ್ತಿದೆ? ಏನು ಮಾಡುತ್ತಿಲ್ಲವೇ? ಕೈ ಕಟ್ಟಿಕೊಂಡು ಕುಳಿತಿದೆಯೇ ಎನ್ನುವಂತಹ ಭಾವನೆ ಯಾವ ಕಾರಣಕ್ಕೂ ಬರಬಾರದು. ಸರ್ಕಾರ ಪ್ರಯತ್ನವನ್ನು ನಡೆಸುತ್ತಿದೆ, ಈ ಅಂಶವನ್ನು ಪತ್ರಿಕೆಗಳು ಮತ್ತು ಟಿ.ವಿ.ಗಳಲ್ಲಿ ಹೇಳಿದ್ದೇವೆ ವಿನಹಾ ಯಾವುದೇ ತೀರ್ಮಾನ ಇಲ್ಲಿಯವರೆಗೆ ಆಗಿಲ್ಲ. ಜೊತೆಗೆ ನಾವು ಏನು ಈ ಪ್ರಯತ್ನವನ್ನು ನಡೆಸುತ್ತಿದ್ದೇವೆ, ಸುಮಾರು 200 MW ನಿಂದ 300 MW ವರೆಗೆ ವಿದ್ಯುತ್ ಖರೀದಿ ಮಾಡಬೇಕು ಎನ್ನುವಂತಹ ಮಾತುಕತೆ ಇವತ್ತು ನಡೆಯುತ್ತಿದೆ. ಅದರ ಬಗ್ಗೆ ಇನ್ನೂ ಯಾವುದೂ ಅಂತಿಮ ತೀರ್ಮಾನವಾಗಿಲ್ಲ. ಇದರ ಜೊತೆಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಛತ್ತೀಸ್‌ಘಡದ ಮುಖ್ಯಮಂತ್ರಿಯನ್ನು ಪ್ರಾರ್ಥನೆ ಮಾಡಿದ್ದಾರೆ. ಇಲ್ಲಿ ಒಂದು ಸಾವಿರ ಮೆಗಾವ್ಯಾಟ್‌ನ ವಿದ್ಯುತ್ ಘಟಕವನ್ನು ನೀವು ಹಾಕಿದರೆ ಅನುಕೂಲವಾಗಬಹುದು, ನಮಗೆ ಒಂದು ಅವಕಾಶ ಮಾಡಿಕೊಡಬಹುದಾ ಎಂದು ಕೇಳಿದ್ದಾರೆ. ಇದರ ಬಗ್ಗೆ ಇನ್ನೂ ಯಾವುದೇ ತೀರ್ಮಾನವಾಗಿಲ್ಲ. ಇದೇ ತಿಂಗಳ 23 ನೇ ತಾರೀಖಿನಂದು ಈ ದಿಕ್ಕಿನಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಎಲ್ಲಾ ವಿರೋಧ ಪಕ್ಷಗಳ ನಾಯಕರ ಒಂದು ವಿಶೇಷ ಸಭೆಯನ್ನು ಬೆಂಗಳೂರಿನಲ್ಲಿ ಕರೆದಿದ್ದಾರೆ. ನಾವು 24 ನೇ ತಾರೀಖು ಸಂಜೆ ನಮ್ಮ ಮುಖ್ಯಮಂತ್ರಿಗಳು ಹಾಗೂ ಛತ್ತೀಸ್‌ಘಡದ ಮುಖ್ಯಮಂತ್ರಿಗಳು ಸೇರಿ ಒಂದು ವಿಶೇಷವಾದ ಸಭೆಯನ್ನು ಕೂಡ ಮಾಡಬೇಕು ಎಂದು ತೀರ್ಮಾನವಾಗಿದೆ.

12-00 PM

23 ನೇ ತಾರೀಖಿನಂದು ನಮ್ಮ ಇಡೀ ರಾಜ್ಯದ ಒಟ್ಟಾಭಿಪ್ರಾಯಗಳನ್ನು ಇಟ್ಟುಕೊಂಡು, ನಾವು

ಮುಂದೆ ಏನು ಮಾಡಬಹುದೆಂಬ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೇವೆ. ಇನ್ನು ವಿಧಾನಸಭೆ ನಡೆಯುತ್ತಿರುವಂಥ ಸಂದರ್ಭದಲ್ಲಿ ಯಾವುದೇ ಘೋಷಣೆಯನ್ನು ಮಾಡಬಾರದೆಂಬ ಅರಿವು ನಮಗೂ ಇದೆ. ನಾವು ಆ ರೀತಿ ಯಾವುದೇ ಘೋಷಣೆ ಮಾಡಿಲ್ಲವೆಂಬ ವಿಷಯವನ್ನು ಸ್ಪಷ್ಟನೆ ಮಾಡುತ್ತಾ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಹೇಳುವುದಕ್ಕೆ ಇಚ್ಛಿಸುತ್ತೇನೆ. ಎರಡನೆಯದಾಗಿ, ಕರ್ನಾಟಕ ರಾಜ್ಯಕ್ಕೆ ಆಘಾತಕಾರಿಯಾದ ಅಂಶ ತಮಗೂ ಗೊತ್ತಿದೆ. ನಮ್ಮ ರಾಜ್ಯಕ್ಕೆ 1,546 ಮೆಗಾವ್ಯಾಟ್‌ನಷ್ಟು allocated ವಿದ್ಯುತ್ ಅವಶ್ಯಕತೆ ಇದೆ. ಇದು ಅಲ್ಲದೇ un-allocated ವಿದ್ಯುತ್ 150 ಮೆಗಾವ್ಯಾಟ್ ಇದೆ. ನಮ್ಮ ರಾಜ್ಯದ ಮುಖ್ಯಮಂತ್ರಿಯವರು ಮತ್ತು ನಾವೆಲ್ಲರೂ ಸೇರಿ ದಿನಾಂಕ 03-07-08 ರಂದು ಕೇಂದ್ರ ಸರ್ಕಾರಕ್ಕೆ ನಮಗೆ ವಿದ್ಯುತ್ ತೊಂದರೆ ಇದೆಯೆಂದು ಪತ್ರವನ್ನು ಬರೆದೆವು. ನಮಗೆ 150 ಮೆಗಾವ್ಯಾಟ್ un-allocated ಇದೆ. ಅದು ಅಲ್ಲದೇ ಇನ್ನು 3,000 ಮೆಗಾವ್ಯಾಟ್ ವಿದ್ಯುತ್ ಅನ್ನು ಕೊಡಬೇಕೆಂದು ನಾವು ಪ್ರಾರ್ಥನೆ ಮಾಡಿ ಪತ್ರವನ್ನು ಬರೆದಿದ್ದೇವೆ. ಈ ಪತ್ರವನ್ನು ಬರೆದಿದ್ದರೂ ಕೂಡ ನಮಗೆಲ್ಲರಿಗೂ ಆಘಾತವೆಂದರೆ, ನಮಗೆ 150 ಮೆಗಾವ್ಯಾಟ್ un-allocated ವಿದ್ಯುತ್ ಇದೆ. ಅದರಲ್ಲಿ 100 ಮೆಗಾವ್ಯಾಟ್ ವಿದ್ಯುತ್‌ಅನ್ನು ಕಟ್ ಮಾಡಿ ಆಂಧ್ರಪ್ರದೇಶಕ್ಕೆ ಕೊಟ್ಟಿದ್ದಾರೆ. ಆ ಬಗ್ಗೆ ನಮಗೆ ಪತ್ರವನ್ನು ಕೂಡಾ ಬರೆದಿದ್ದಾರೆ. ಅದರ ಬಗ್ಗೆ ನಾವು ಕೇಂದ್ರ ಸರ್ಕಾರದ ವಿದ್ಯುತ್ ಮಂತ್ರಿಯವರೊಡನೆ ಮತ್ತು ಕೇಂದ್ರ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳೊಡನೆ ಈಗಾಗಲೇ ಪತ್ರ ವ್ಯವಹಾರವನ್ನು ಮಾಡಿದ್ದೇವೆ ಮತ್ತು ಫೋನ್‌ನಲ್ಲೂ ಮಾತನಾಡಿದ್ದೇವೆ. ನಾವು ಇದರ ಬಗ್ಗೆ ಗಮನಿಸಬೇಕೆಂದು ಚರ್ಚೆಯನ್ನು ಮಾಡಿದ್ದೇವೆ. ನಾವು ಒಂದು ನಿಯೋಗ ಕೂಡ ಕೇಂದ್ರ ಸರ್ಕಾರಕ್ಕೆ ಹೋಗಿದ್ದೇವೆ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈಗ ಎಲ್ಲೆಲ್ಲಿ ಬಿ.ಜೆ.ಪಿ. ಸರ್ಕಾರಗಳು ಇವೆಯೋ ಅಲ್ಲಿ ನಾವು ಪ್ರಯತ್ನ ಮಾಡುತ್ತೇವೆ. ಬೇರೆ ಬೇರೆ ಕಡೆಗಳಲ್ಲಿ ಯಾವ್ಯಾವ ಸರ್ಕಾರಗಳು ಇವೆಯೋ ಅಲ್ಲೂ ಕೂಡ ಪ್ರಯತ್ನ ಮಾಡಿ, ಖಾಸಗಿ ವ್ಯಕ್ತಿಗಳೊಡನೆ ಕೂಡ ಪ್ರಯತ್ನ ಮಾಡಿ ಈಗ ವಿದ್ಯುತ್ ಅಭಾವ ಇರುವಂಥ ಸಂದರ್ಭದಲ್ಲಿ ಎಷ್ಟು ತರಿಸಲು ಸಾಧ್ಯವಿದೆಯೋ ಅಷ್ಟನ್ನು ತರಿಸಿಕೊಳ್ಳುವಂಥ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಕೂಡ ಅವರ ಪಕ್ಷದ ಸರ್ಕಾರಗಳು ಎಲ್ಲೆಲ್ಲಿ ಇದೆ, ಎಲ್ಲೆಲ್ಲಿ influence ಮಾಡಬಹುದು, ಕೇಂದ್ರ ಸರ್ಕಾರದೊಡನೆ ಏನು ಮಾಡಬಹುದು, ಆ ದಿಕ್ಕಿನಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಯತ್ನ ಮಾಡಿ, ರಾಜ್ಯದಲ್ಲಿ ಇರುವಂಥ ವಿದ್ಯುತ್ ಬರವನ್ನು ನೀಗಿಸುವ ದಿಕ್ಕಿನಲ್ಲಿ ನಾವು, ಅವರು ಸೇರಿ ಪ್ರಯತ್ನ ಮಾಡಿ ಈ ದಿಕ್ಕಿಲ್ಲಿ ಯಶಸ್ವಿಯಾಗುತ್ತೇವೆಂಬ ವಿಶ್ವಾಸವಿದೆಯೆಂಬ ಮಾತನ್ನು ಹೇಳುತ್ತೇನೆ. ನಾನು ಮತ್ತೊಮ್ಮೆ ಸ್ಪಷ್ಟ ಮಾಡುವುದಕ್ಕೆ ಹೇಳುವುದೇನೆಂದರೆ ನಾನಾಗಲಿ ಮಾನ್ಯ ಮುಖ್ಯಮಂತ್ರಿಯವರಾಗಲಿ ವಿಧಾನಸಭೆ ನಡೆಯುತ್ತಿರುವಂಥ ಸಂದರ್ಭದಲ್ಲಿ ಯಾವುದೇ ಘೋಷಣೆಯನ್ನು ಮಾಡಿಲ್ಲ. ನಿಜ, ಇದಕ್ಕೆ 5,000 ಕೋಟಿ ರೂಪಾಯಿಗಳಷ್ಟು ಹಣ ಬೇಕು. ಇದರ ಬಗ್ಗೆ ಚರ್ಚೆ ನಡೆಸುತ್ತಿದ್ದೇವೆ. 1,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವ ಪ್ರಯತ್ನ ಮಾಡಬೇಕಾ, 2,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವಂಥ ಪ್ರಯತ್ನ ಮಾಡಬಹುದಾ,

ಎಂಬ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಅದು ಬಿಟ್ಟರೆ ಯಾವುದೇ ತೀರ್ಮಾನ ಇನ್ನು ಆಗಿಲ್ಲ, ಯಾವ ಘೋಷಣೆಯನ್ನು ಮಾಡಿಲ್ಲವೆಂಬ ವಿಷಯವನ್ನು ಹೇಳಲಿಚ್ಛಿಸುತ್ತೇನೆ. ವಿದ್ಯುತ್ ಅಭಾವವನ್ನು ಸರಿಪಡಿಸುವುದಕ್ಕೆ, ರಾಜ್ಯದ ಎಲ್ಲಾ ರೈತರಿಗೆ, ನಾಗರೀಕರಿಗೆ ಧೈರ್ಯವನ್ನು ತುಂಬುವ ದಿಕ್ಕಿನಲ್ಲಿ ಮತ್ತು ವಿದ್ಯುತ್ ಅನ್ನು ತರುವ ದಿಕ್ಕಿನಲ್ಲಿ ಎಲ್ಲಾ ರೀತಿಯ ಪ್ರಯತ್ನಗಳನ್ನು ನಡೆಸುತ್ತಿದ್ದೇವೆಂಬ ಅಂಶವನ್ನು ತಮ್ಮ ಮುಖಾಂತರ ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ನನ್ನ question ಅದಲ್ಲ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಇಂಧನ ಸಚಿವರು ಹೇಳಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ರೇವಣ್ಣನವರೇ, ತಾವು ಹೇಳುತ್ತೀರಾ....

ಶ್ರೀ ಹೆಚ್. ಡಿ. ರೇವಣ್ಣ : ಒಂದು ನಿಮಿಷ ನಾನು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಹಿಂದೆ ಇಂಧನ ಸಚಿವರಾಗಿದ್ದೀರಿ, ತಾವು ಹೇಳಿ.

ಶ್ರೀ ಹೆಚ್. ಡಿ. ರೇವಣ್ಣ : ಕೇಂದ್ರ ಸರ್ಕಾರ 100 ಮೆಗಾವ್ಯಾಟ್ ವಿದ್ಯುತ್ ಅನ್ನು ಆಂಧ್ರಪ್ರದೇಶಕ್ಕೆ ಕೊಟ್ಟಿದೆಯೆಂದು ತಾವು ಹೇಳಿಕೆ ಕೊಟ್ಟಿದ್ದೀರಿ. ತಾವು ಹೇಳಿಕೆಯನ್ನು ಕೊಡುವುದಕ್ಕೆ ಮುಂಚೆ ಯಾವ ಉದ್ದೇಶಕ್ಕೆ ಈ ರೀತಿಯಾಗಿ ಮಾಡಿದ್ದಾರೆಂಬುದನ್ನು ತಿಳಿದುಕೊಳ್ಳಬೇಕಾಗಿತ್ತು. ಹಿಂದೆ ಒಂದು ಸಾರಿ ಇದೇ ರೀತಿಯಾಗಿ ನಮಗೆ ಕೊಡಬೇಕಾದ ವಿದ್ಯುತ್‌ನಲ್ಲಿ 100 ಮೆಗಾವ್ಯಾಟ್‌ನ್ನು ಕಡಿಮೆ ತಮಿಳು ನಾಡಿಗೆ ಕೊಟ್ಟಿದ್ದರು. ನಾವು fight ಮಾಡಿ ಅದನ್ನು ವಾಪಸ್ಸು ರಾಜ್ಯಕ್ಕೆ ತಂದಿದ್ದೆವು. ಇದೇ ರೀತಿಯಾಗಿ ಈಗ ಆಂಧ್ರಪ್ರದೇಶಕ್ಕೆ ಕೊಟ್ಟಿರುವ ವಿಚಾರವನ್ನು ಹೇಳಿದ್ದೀರಿ. ಇದನ್ನು ಪತ್ರಿಕೆಗಳಿಗೆ ಹೇಳುವುದಕ್ಕಿಂತ ವಿಧಾನಸಭೆಯಲ್ಲೇ ಒಂದು statement ಮಾಡಿದ್ದರೆ ಅನುಕೂಲವಾಗುತ್ತಿತ್ತು. ರಾಜಕೀಯ ದುರುದ್ದೇಶದಿಂದ ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಿದೆಯೆಂದು, ಇಲ್ಲಿ ಯಾವ ವಿಚಾರವನ್ನು ಕೇಳಿದರೂ ಗೊಬ್ಬರದಲ್ಲಿ ಅನ್ಯಾಯವಾಯಿತು, ಈಗ ಇಂಧನದಲ್ಲಿ ಅನ್ಯಾಯವಾಯಿತು ಅನ್ನುವ ಭಾವನೆಯನ್ನು ಈ ರಾಜ್ಯದ ಜನತೆಗೆ ಮೂಡಿಸುವಂಥ ಕಾರ್ಯಕ್ರಮವನ್ನು ತಾವು ಮಾಡುತ್ತಿದ್ದೀರೆನ್ನುವುದನ್ನು ನಾನು ಈ ಸದನದ ಮೂಲಕ ಜನತೆಗೆ ತಿಳಿಸಬೇಕಾಗುತ್ತದೆ. ಇದೂ ಇಲ್ಲದೇ ತಾವು 25ನೆ ತಾರೀಖಿನಂದು MOU ಗೆ ಸಹಿ ಮಾಡುತ್ತೇವೆಂದು ಹೇಳಿದ್ದೀರಿ. ತಾವು 25 ನೇ ತಾರೀಖು ಛತ್ತೀಸ್‌ಗಡ್‌ಗೆ ಹೋಗಿ 2,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದೇವೆಂದು, ಅದೂ 40 ದಿವಸಗಳಲ್ಲೆ ಎಂಬ ಭಾವನೆಯಿಂದ ಹೇಳುತ್ತಿದ್ದೀರಿ. ಅಂದರೆ ಇಲ್ಲಿ ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಿದೆ, ರಾಜ್ಯ ಸರ್ಕಾರ ಒಂದು ಕಡೆ ಗೊಬ್ಬರದ ಬಗ್ಗೆ, ಮತ್ತೊಂದು ಕಡೆ ಇಂಧನದ ವಿಚಾರವಾಗಿ, ಇಲ್ಲಿ ವಿಧಾನ ಸಭೆ ನಡೆಯುತ್ತಿರುವಂಥ ಸಂದರ್ಭದಲ್ಲಿ ಇಂಥ ವಿಷಯಗಳನ್ನು ಸಭೆಯ ಗಮನಕ್ಕೆ ತರುವಂಥಾದ್ದು ಮುಖ್ಯವೆಂದು ಹೇಳುತ್ತಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳಿದ್ದಾರೆ, ಅದನ್ನು ತಾವು ಮಾಡಬೇಕಾಗಿತ್ತು. ತಾವು ಇದನ್ನು ಇನ್ನು ಮುಂದಾದರೂ ಮಾಡಬೇಕೆಂಬುದು ನನ್ನ ಭಾವನೆ ಇದೆ. ಇದೂ ಅಲ್ಲದೇ ಇಂಧನದ ಬಗ್ಗೆ ಹಿಂದೆ

ನಮ್ಮ ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಬೇಕೆಂದು ಇತ್ತು. ಆಗ ತಾವು ಸಹ Cabinet Minister ಆಗಿದ್ದಿರಿ. ಅದು ನನ್ನ ಕೈಯಲ್ಲಿ ಆಗುವುದಿಲ್ಲವೆಂದು ಬಿಟ್ಟರು. ಅದನ್ನು ಯಾವ ಉದ್ದೇಶಕ್ಕಾಗಿ ಬಿಟ್ಟರೋ ನನಗೆ ಗೊತ್ತಿಲ್ಲ. ಅವರ ಅಧ್ಯಕ್ಷತೆಯಲ್ಲೇ ಒಂದು ಸಮಿತಿಯಾಗಿತ್ತು. ನಾನು ರಾಜ್ಯದಲ್ಲಿ ಮುಂದಿನ 25 ವರ್ಷಗಳಲ್ಲಿ ಏನಾಗಬೇಕಂಬ ಬಗ್ಗೆ ಈ ಸದನದ ಮುಖೇನ ಹತ್ತು ಸಾರಿ ಹೇಳಿದ್ದೇನೆ, ಸಚಿವ ಸಂಪುಟ ಸಭೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯ ಅಧ್ಯಕ್ಷತೆಯಲ್ಲಿ ಒಂದು ಸಭೆಯಾಗಿತ್ತು, ಮತ್ತೆ ಅದನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಅವರೇ ಬೇಡವೆಂದು cancel ಮಾಡಿಸಿದರು. ಈಗ ಕಾಳಜಿ ವಹಿಸಿರುವಂಥಾದ್ದು ನಿಜಕ್ಕೂ ಸಂತೋಷವೆಂದು ಹೇಳಬೇಕಾಗುತ್ತದೆ. ಈ ಕೆಲಸ ಹಿಂದೆಯೇ ಮಾಡಿದ್ದರೆ ಈ ರೀತಿ ವಿದ್ಯುತ್ ಅಭಾವ ಬರುತ್ತಿರಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಇತಿಹಾಸದಲ್ಲಿ ಬಹುಶಃ ಹಿಂದೆಂದೂ ಯಾವುದೇ ಸಚಿವರು ಇಷ್ಟು ದೀರ್ಘಕಾಲ Power Minister ಆಗಿರಲಿಲ್ಲ. ಮಾನ್ಯ ರೇವಣ್ಣನವರು ಇಂಧನ ಸಚಿವರಾಗಿ ಕೆಲಸ ಮಾಡಿದಂಥವರು ಇಲ್ಲಿದ್ದಾರೆ. ಇಲ್ಲಿ ಪ್ರಶ್ನೆ ಇರುವಂಥಾದ್ದು ಇಷ್ಟೆ, ವಿದ್ಯುತ್ ಅಭಾವ ಇಡೀ ರಾಜ್ಯದಲ್ಲಿ ಹಿಂದೆಂದೂ ಇಲ್ಲದಷ್ಟು ಬರಗಾಲದ ವಾತಾವರಣ, ಜಲಾಶಯಗಳಲ್ಲಿ ನೀರು ಇಲ್ಲ, ಕೆರೆ ಕಟ್ಟೆಗಳಲ್ಲಿ ನೀರಿಲ್ಲ. ಇಂಥ ದಾರುಣ ಸ್ಥಿತಿ ಇದ್ದಾಗ, ದೇಶದ ಪರಿಸ್ಥಿತಿ ಗೊತ್ತಿರುವಂಥ ಕೇಂದ್ರ ಸರ್ಕಾರ ಇಂಥ ಸಂದರ್ಭದಲ್ಲಿ ಹೆಚ್ಚುವರಿ ವಿದ್ಯುತ್‌ನ ಬೇಡಿಕೆಯನ್ನು ಇಟ್ಟಾಗ ಇದ್ದುದ್ದನ್ನೇ ಕಡಿತ ಮಾಡುವಂಥಾದ್ದು ಎಷ್ಟರಮಟ್ಟಿಗೆ ಸರಿ, ಎನ್ನುವಂಥಾದ್ದನ್ನು ನಾವು ನೀವೆಲ್ಲಾ ಒಟ್ಟಾಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ತಂದು ಹೆಚ್ಚಿಗೆ ತರುವ ಪ್ರಯತ್ನವನ್ನು ಮಾಡೋಣ. ಈ ಬಗ್ಗೆ ನಾವು ಮತ್ತು ಇಂಧನ ಸಚಿವರು ಈ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಈ ದೇಶದ ಅನೇಕ ರಾಜ್ಯಗಳಿಗೆ ಕಳುಹಿಸಿದ್ದೇವೆ. ಎಲ್ಲೆಲ್ಲಿ ಎಷ್ಟು ವಿದ್ಯುತ್ ಇದೆ, ಅದನ್ನು ಕಾಡಿ ಬೇಡಿಯಾದರೂ ತೆಗೆದುಕೊಳ್ಳುವಂಥಾದ್ದು ಆಗಬೇಕು. ಇವತ್ತು ಒಂದು ಕಡೆ ಬರಗಾಲದ ವಾತಾವರಣ ಇನ್ನೊಂದು ಕಡೆ ವಿದ್ಯುತ್ ಇಲ್ಲದೇ ಕತ್ತಲೆಯಲ್ಲಿರುವಂಥ ವಾತಾವರಣ ಇದೆ. ಈ ಸಮಯದಲ್ಲಿ ಎಲ್ಲೆಲ್ಲಿ ವಿದ್ಯುತ್ ಅನ್ನು ತರುವುದಕ್ಕೆ ಸಾಧ್ಯವಿದೆ, ಆ ಪ್ರಯತ್ನವನ್ನು ಮಾಡಬೇಕೆಂದು ನಾವು ಛತ್ತೀಸ್‌ಗಡಕ್ಕೆ ಕಳುಹಿಸಿಕೊಟ್ಟಿದ್ದೆವು. ಯಾವುದೋ ಒಂದು ವಿಶೇಷ ಕಾರಣಕ್ಕಾಗಿ ಛತ್ತೀಸ್‌ಗಡದ ಮುಖ್ಯಮಂತ್ರಿಯವರು ಜಿಂದಾಲ್‌ನಲ್ಲಿ ರಮಣಸಿಂಗ್ ಇದ್ದಾಗ ಮಾನ್ಯ ಈಶ್ವರಪ್ಪನವರು ಅವರನ್ನು ಭೇಟಿ ಮಾಡಿದರು. ನಾನು ಮೊನ್ನೆ ನಮ್ಮ ಅಧಿಕಾರಿಗಳನ್ನು ಭೇಟಿ ಮಾಡಿ, ಈಗಾಗಲೇ ನಮ್ಮ ಅಧಿಕಾರಿಗಳು ಎರಡು ಮೂರು ಸುತ್ತು ಅವರನ್ನು ಭೇಟಿ ಮಾಡಿ ಪ್ರಯತ್ನವನ್ನು ಮಾಡಿದ್ದಾರೆ. ಬೇರೆ ರಾಜ್ಯಗಳಿಗೆ ಕೊಡುವಂಥ ವಿದ್ಯುತ್ ಅನ್ನು ಇಂಥಾ ತೊಂದರೆ ಇರುವಂಥ ಕಾಲದಲ್ಲಿ ನಮಗೆ 500 ಮೆಗಾವ್ಯಾಟ್ ವಿದ್ಯುತ್ ಅನ್ನು ನಮಗೆ ಕೊಡಿಯೆಂದು ವಿನಂತಿ ಮಾಡಿದಾಗ 200 ಮೆಗಾವ್ಯಾಟ್ ನಿಂದ 250 ಮೆಗಾವ್ಯಾಟ್ ಕೊಡಬೇಕೆಂಬ ಬಗ್ಗೆ ಚರ್ಚೆಯೂ ನಡೆದಿದೆ. ಅವರ ಜೊತೆಯಲ್ಲಿ ಮಾತುಕತೆಯನ್ನು ನಡೆಸುತ್ತಿದ್ದೇವೆ. ಇನ್ನು ತಮಗೆ ಗೊತ್ತಿರುವ ಹಾಗೆ ಕಲ್ಲಿದ್ದಲು ಸಮಸ್ಯೆಯು ಬೃಹದಾಕಾರವಾಗಿ ಕಾಡುತ್ತಿದೆ. ನಮ್ಮ ಹತ್ತಿರ ಮೂರ್ನಾಲ್ಕು ದಿವಸಗಳ ವಿದ್ಯುತ್ ಉತ್ಪಾದನೆಗೆ ಬೇಕಾಗುವ

ಕಲ್ಲಿದ್ದಲು ಸ್ಟಾಕ್ ನಮ್ಮ ಹತ್ತಿರ ಇಲ್ಲ. ನಾವು ಇಂಥಾ ಸಂದರ್ಭದಲ್ಲಿ ಅಲ್ಲಿ 2,000 ಮೆಗಾವ್ಯಾಟ್ ವಿದ್ಯುತ್‌ಅನ್ನು ಉತ್ಪಾದನೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿದರೆ ಏನಾಗಬಹುದೆಂದು ನಾವು ಅವರನ್ನು request ಮಾಡಿಕೊಳ್ಳುತ್ತಿದ್ದೇವೆ. ಆ ದಿಕ್ಕಿನಲ್ಲಿ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅವರು ಏನಾದರೂ ನಮಗೆ ಪ್ರಾರಂಭಕ್ಕೆ ಅಲ್ಲಿ 1,000 ಮೆಗಾವ್ಯಾಟ್‌ಗೆ ಅನುಮತಿಯನ್ನು ಕೊಟ್ಟರೆ, ನಮಗೆ ವಿದ್ಯುತ್ ಕೈಗೆ ಸಿಗಬೇಕೆಂದರೆ ಮೂರೂವರೆ ವರ್ಷಗಳಿಂದ ಐದು ವರ್ಷಗಳು ಬೇಕು. ಒಂದು ಸಾವಿರ ಎಕರೆ ಆ ಸರ್ಕಾರದ ಜಮೀನನ್ನು ನಮಗೆ ಕೊಡಿಯೆಂದು ವಿನಂತಿ ಮಾಡುತ್ತಿದ್ದೇನೆ. ಈ ರೀತಿಯಾಗಿ ಒಂದು ಕಡೆ ಪ್ರಯತ್ನ ನಡೆದಿದೆ, ಇನ್ನೊಂದು ಕಡೆ ಈ ದಿವಸ ಬಂದಿರುವಂಥ ಮಾಹಿತಿ ಪ್ರಕಾರ ಜಿಂದಾಲ್‌ನವರು 50 ಮೆಗಾವ್ಯಾಟ್ ವಿದ್ಯುತ್, ಟಾಟಾರವರು 50 ಮೆಗಾವ್ಯಾಟ್ ವಿದ್ಯುತ್ ಅನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಈ Energy Excise ನಿಂದ 200 ರಿಂದ 300 ಮೆಗಾವ್ಯಾಟ್ ವಿದ್ಯುತ್‌ಅನ್ನು ಕೊಡಬಹುದು. ಹೀಗೆ ಏನಾದರೂ ಮಾಡಿ ಈ ರಾಜ್ಯದ ಜನರು ಒಂದು ರೀತಿಯ ಭಯಭೀತರಾಗಿ ಈಗ ಪಂಪ್‌ಸೆಟ್‌ಗಳು ನಡೆಯುವುದಕ್ಕೆ ಆಗದೇ ಇರುವಂಥ ಪರಿಸ್ಥಿತಿ ಇರಬೇಕಾದರೆ, ಸರ್ಕಾರ ಈ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆಯೆಂಬುದು ಒಂದು ಸಂಗತಿ. ಇನ್ನೊಂದು ವಿಚಾರವೇನೆಂದರೆ ಪ್ರತಿಪಕ್ಷದ ನಾಯಕರಿಗೆ ಮತ್ತು ಮಾನ್ಯ ರೇವಣ್ಣನವರಿಗೆ, ಇತರ ಎಲ್ಲಾ ಪ್ರಮುಖರಿಗೆ ನಾನು 23 ನೇ ತಾರೀಖಿನಂದು ಸಾಯಂಕಾಲ ಒಂದೆರಡು ಪ್ರಮುಖವಾದ ವಿಷಯಗಳೆಂದರೆ ಮೊದಲನೆಯದಾಗಿ ನಾವು ಛತ್ತೀಸ್‌ಗಡದ ಮುಖ್ಯಮಂತ್ರಿಯವರ ಜೊತೆಗೆ 24 ನೇ ತಾರೀಖಿನಂದು ಒಟ್ಟಿಗೆ ಸೇರಿ ಒಂದು ನಿರ್ಧಾರ ಮಾಡಬೇಕೆಂದು ಇದ್ದೇವೆ. ನಾನು ಅಲ್ಲಿಗೆ ಹೋಗಿ MOU ಗೆ ಸಹಿ ಮಾಡಬೇಕೆಂದು ಇದ್ದೇನೆ. ಅದಕ್ಕೂ ಮುಂಚೆ ಈ ಸದನದಲ್ಲಿ ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಅದಕ್ಕಾಗಿ ಈಗ ಹೊಗೇನಕಲ್ ವಿಷಯವಿರಬಹುದು, ನಾವು ರಸಗೊಬ್ಬರದ ಅಭಾವ ಹತ್ತಾರು ಬಾರಿ ಕಾಡಿ ಬೇಡಿದ ಮೇಲೂ ಸಹ ರಸಗೊಬ್ಬರ ಕೊಡದೇ, ಸತ್ಯಾಗ್ರಹ, ಚಳುವಳಿ ನಡೆಯುತ್ತಿರುವಂಥಾದ್ದು, ಗೊಂದಲದ ವಾತಾವರಣ ಉಂಟಾಗುವಂಥ ವಿಷಯದ ಬಗ್ಗೆಯೂ ಇರಬಹುದು. ಇವತ್ತು ನಾವು ಛತ್ತೀಸ್‌ಗಡದ ಮುಖ್ಯಮಂತ್ರಿಯವರ ಜೊತೆಗೆ ಮಾತನಾಡಿ ಒಂದು ಒಡಂಬಡಿಕೆಗೆ ಬಂದು 2,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಡಿಯೆಂದು ವಿನಂತಿ ಮಾಡುತ್ತಿದ್ದೇವೆ, ಅದು ಸಾಧ್ಯವಿಲ್ಲ, ಒಂದು ಸಾವಿರ ಎಕರೆಯಷ್ಟು ಪ್ರಯತ್ನ ಮಾಡಬಹುದೆಂದು ಹೇಳಿದ್ದಾರೆ. ಅದಕ್ಕೆ ಏನೇನು ಬೇಕೋ ಒತ್ತಾಯ ಅದನ್ನು ನಾವು ಮಾಡುತ್ತಿದ್ದೇವೆ. ಅದರಿಂದ ಏನು ಸಾಧಕ-ಬಾಧಕಗಳಿವೆ, ಯಾವ ರೀತಿ ನಮಗೆ ಅನುಕೂಲವಾಗುತ್ತದೆ. ಅದೆಲ್ಲವನ್ನು ಪ್ರತಿಪಕ್ಷದ ಮುಖಂಡರುಗಳನ್ನೆಲ್ಲಾ ಕರೆದು, ಎಲ್ಲಾ ವಿವರಗಳನ್ನು ನಿಮಗೆ ಒದಗಿಸಿಕೊಡುತ್ತೇವೆ. ಅದರ ಆಧಾರದ ಮೇಲೆ ರಾಜ್ಯದ ಹಿತದೃಷ್ಟಿಯಿಂದ ತಾವೆಲ್ಲಾ ಏನು ಮಾಡಬೇಕೆಂದು ಮಾರ್ಗದರ್ಶನ ಮಾಡುತ್ತೀರೋ, ಆ ರೀತಿ ನಡೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ನಿಮ್ಮೆಲ್ಲಾ ಪ್ರಮುಖರನ್ನು 23 ನೇ ತಾರೀಖಿನಂದು ಸಾಯಂಕಾಲ ಕರೆದು ನೀವೇನು ಸಲಹೆ ಕೊಡುತ್ತೀರಾ, ನೀವು ಏನು ಒಪ್ಪಿಗೆ ಕೊಡುತ್ತೀರಾ, ಇದು ರಾಜ್ಯದ ಹಿತದೃಷ್ಟಿಯಿಂದ ಚರ್ಚೆ ಮಾಡಬೇಕಾಗಿರುವಂಥಾದ್ದು. ಒಬ್ಬ ಮುಖ್ಯಮಂತ್ರಿಯಾಗಿ, ಇಂಧನ ಸಚಿವರಾಗಿ, ನಮ್ಮ ಅಧಿಕಾರಿಗಳು

ಈ ರೀತಿಯ ವಾತಾವರಣದಲ್ಲಿ ಎನು ಪ್ರಯತ್ನ ಮಾಡಿದ್ದೀರಿ? ಎಂದರೆ ನಾವು ಈ ಪ್ರಾಮಾಣಿಕ ಪ್ರಯತ್ನವನ್ನು ನಡೆಸಿದ್ದೇವೆ. ಈ ವಿಚಾರವನ್ನು ರಾಜ್ಯದ ಜನತೆಗೆ ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ, ಮತ್ತೆ ತಮ್ಮನ್ನೆಲ್ಲಾ ಕರೆದು ಸಮಾಲೋಚನೆ ಮಾಡುತ್ತೇನೆ. ತಾವು ಅಂತಿಮವಾಗಿ ಯಾವುದು ಸರಿಯೆಂದು ಸಲಹೆ ಕೊಡುತ್ತೀರೊ, ಆ ತೀರ್ಮಾನವನ್ನು ಮಾಡುವುದಕ್ಕೆ ನಾನು ಬದ್ಧನಾಗಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಈಗ ಅವರ ಪ್ರಯತ್ನದ ಬಗ್ಗೆ ಇಲ್ಲಿ ಪ್ರಶ್ನೆ ಮಾಡುತ್ತಿಲ್ಲ. ನನ್ನ ಪ್ರಶ್ನೆಯೇನೆಂದರೆ ಈ ಸದನದಲ್ಲಿ ನಡೆದ ಘಟನೆಗಳನ್ನು ನೋಡಿದರೆ ಯಾವುದೇ ಒಂದು issue ಮೇಲೆ statement ಅನ್ನು ಸದನ ನಡೆಯುವಾಗ ಹೊರಗಡೆ ಮಾಡಬಾರದೆಂದು ಒಂದು ನಿಯಮವಿದೆ. ಆ ರೀತಿ ನಿಯಮ ಇದ್ದಾಗ, policy matter ಅನ್ನು announce ಮಾಡುವಾಗ, House ನಡೆಯುತ್ತಿದ್ದರೆ, Houseನಲ್ಲೇ ಮಾಡಬೇಕು, ತದನಂತರ ಹೊರಗಡೆ ಹೇಳಬೇಕು ಅನ್ನತಕ್ಕಂಥ ನಿಯಮಗಳನ್ನು ನಾವು ಹಾಕಿಕೊಂಡಿದ್ದೇವೆ. ಅದನ್ನು ಬಿಟ್ಟು ನೀವು ಹೊರಗಡೆ ಹೇಗೆ announce ಮಾಡಿದಿರಿ ಎನ್ನುವುದೇ ನಮ್ಮ ಪ್ರಶ್ನೆ. ನಿಮ್ಮ ಪ್ರಯತ್ನ, ಕೇಂದ್ರ ಸರ್ಕಾರದಿಂದ ಬರುವುದು, ಕೊರತೆ ಇರುವುದು ಇವೆಲ್ಲವನ್ನೂ ನಾವು ನೀವು discuss ಮಾಡೋಣ. ಆದರೆ, ಅನೇಕ ಪತ್ರಿಕೆಗಳಲ್ಲಿ ಬಂದಿದೆ. ಉದಾಹರಣೆಗೆ, ನಾನು ನಿಮ್ಮ notice ಗೆ ಒಂದನ್ನು ತರುತ್ತೇನೆ. "ಜುಲೈ 19, ತನ್ನ ನೆಲದಲ್ಲಿ 2000 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪಿಸಲು ಛತ್ತೀಸ್‌ಘಡ ಸರ್ಕಾರ ಕರ್ನಾಟಕಕ್ಕೆ ಅನುಮತಿ ನೀಡಿದೆ." ಇದು 'ಕನ್ನಡಪ್ರಭ' ಪತ್ರಿಕೆಯಲ್ಲಿ ಬಂದಿರತಕ್ಕಂಥಾದ್ದು. ಇದು ಸರಿಯಿಲ್ಲ ಎನ್ನುವುದಾದರೆ ಇದನ್ನು ನೀವು deny ಮಾಡಿದಿರೇ ಎನ್ನುವುದು ಒಂದು ಪ್ರಶ್ನೆ. ಇದರಲ್ಲಿ ಬಂದಿರುವುದು ಸರಿಯಲ್ಲ ಎಂದು ಹೇಳುತ್ತೀರಿ, ಹೊರಗಡೆ policy matter statement ಮಾಡುತ್ತೀರಿ. ಹೊರಗಡೆ ಮಾಡಿ ಎಂದು ನಿಮಗೆ ಯಾರು ಹೇಳಿದರು? ನಮ್ಮನ್ನು, ಈ ಸದನವನ್ನು ನೀವು ವಿಶ್ವಾಸಕ್ಕೆ ತೆಗೆದುಕೊಂಡಿರಾ? ಸದನದಲ್ಲಿ ಎಲ್ಲರೂ ಇರಲಿಲ್ಲವೇ? ಇಲ್ಲಿ ನೀವು ಒಂದು statement ಮಾಡಿ, ರಾಜ್ಯದಲ್ಲಿ ವಿದ್ಯುತ್ ಕೊರತೆ ಇದೆ, ಅದಕ್ಕಾಗಿ ನಾವು ಹೀಗೆ ಮಾಡಿದ್ದೇವೆ, ನಾವು ಹೀಗೆ ಮುಂದುವರೆಯುತ್ತಿದ್ದೇವೆ, ನಾವು ಖರೀದಿ ಮಾಡುತ್ತಿದ್ದೇವೆ ಅಥವಾ ಹೊಸದಾಗಿ ಘಟಕ ಹಾಕುತ್ತಿದ್ದೇವೆ ಅನ್ನತಕ್ಕಂಥಾದ್ದನ್ನು ನೀವು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು ಎನ್ನತಕ್ಕಂಥಾದ್ದೆ ನನ್ನ ವಾದ. ಅದನ್ನು ನೀವು ಏಕೆ ಮಾಡಲಿಲ್ಲ? ಇದನ್ನು ನೀವು ಹೇಳಬೇಕು. This is the point of order I have raised. ಈ point of order ಅನ್ನು ನಾವು privilege ಎಂದು ಹೇಳುತ್ತಿಲ್ಲ. ಯಾವ ರೀತಿಯಾಗಿ ನೀವು ಈ ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದೀರಿ, ಯಾವಾಗಲೂ ಕೂಡ ಲಘುವಾಗಿ ತೆಗೆದುಕೊಳ್ಳುತ್ತಿದ್ದೀರಿ, ನಾವು ಹೊರಗಡೆ ಏನು ಹೇಳಿದರೂ ನಡೆಯುತ್ತದೆ, ಒಳಗಡೆ ಏನು ಹೇಳಿದರೂ ನಡೆಯುತ್ತದೆ ಎನ್ನತಕ್ಕಂಥಾದ್ದು ಇದರಿಂದ ಆಗುತ್ತದೆ. ನಿಮಗೆ ಏನು ಅಂಥ ಒತ್ತಡ ಬಂತು? ಸದನ ನಡೆಯುತ್ತಿತ್ತು, ಇಲ್ಲೇ ಹೇಳಬಹುದಾಗಿತ್ತು, ಇಲ್ಲೇ ಒಂದು statement ಮಾಡಬಹುದಾಗಿತ್ತು. ಅಂಥ ಏನು ಒತ್ತಡ ನಿಮಗೆ ಬಂತು ಎನ್ನುವ ಪ್ರಶ್ನೆಯನ್ನು ನಾನು ನಿಮಗೆ ಕೇಳುತ್ತಿದ್ದೇನೆ. This is the point of order.

ಶ್ರೀ ಕೆ. ಎಸ್. ಈಶ್ವರಪ್ಪ (ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ, 2000 ಮೆಗಾವ್ಯಾಟ್‌ನಷ್ಟು ಸಾಮರ್ಥ್ಯದ ವಿದ್ಯುತ್ ಘಟಕವನ್ನು ಅಲ್ಲಿ ಸ್ಥಾಪನೆ ಮಾಡಬೇಕು ಎನ್ನುವ ತೀರ್ಮಾನವೇ ಆಗಿಲ್ಲ. ಪ್ರಯತ್ನವಷ್ಟೇ ನಡೆದಿದೆ. 1000 ಮೆಗಾವ್ಯಾಟ್‌ಗಾದರೂ ಅವಕಾಶ ಕೊಡಿ, 2000 ಮೆಗಾವ್ಯಾಟ್‌ಗಾದರೂ ಅವಕಾಶ ಕೊಡಿ, ಎಷ್ಟಾದರೂ ಕೊಡಿ ಎಂದು ಅವರಿಗೆ ಕೇಳುತ್ತಿದ್ದೇವೆ. ಅಲ್ಲಿ ಮಾಡುವುದಕ್ಕೆ ನಮಗೆ ಒಂದು ಅವಕಾಶ ಮಾಡಿಕೊಡಿ ಎಂದು ಅವರಿಗೆ ಪ್ರಾರ್ಥನೆ ಮಾಡುತ್ತಿದ್ದೇವೆ. ಎರಡನೆಯದಾಗಿ, 500 ಮೆಗಾವ್ಯಾಟ್ ವಿದ್ಯುತ್ ಆದರೂ ಕೊಡಿ ಎಂದು ಇನ್ನೂ ಕೇಳುತ್ತಿದ್ದೇವೆ. ತೀರ್ಮಾನವಾಗಿ ಹೋಗಿದೆ ಎಂದು ನಾವು ಯಾರೂ ಹೇಳಿಲ್ಲ. ಒಂದು ಪತ್ರಿಕೆಯಲ್ಲಿ ಬಂದಿದೆ ಎಂದ ಮಾತ್ರಕ್ಕೆ ಅದು ನಮ್ಮ ಹೇಳಿಕೆಯೇ ಅಲ್ಲ. ನಾನು ತುಂಬಾ ಸ್ಪಷ್ಟವಾಗಿ ವಿರೋಧ ಪಕ್ಷದ ನಾಯಕರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ, ನಾವು ಎಲ್ಲಾ ಪ್ರಯತ್ನಗಳನ್ನೂ ಕೂಡ ನಡೆಸುತ್ತಿದ್ದೇವೆ. ಛತ್ತೀಸ್‌ಘಡದ ಮುಖ್ಯಮಂತ್ರಿಗಳ ಜೊತೆಗೆ, ಆ ಸರ್ಕಾರದ ಜೊತೆಗೆ ಪ್ರಯತ್ನಗಳು ಇವತ್ತಲ್ಲ, ಅನೇಕ ತಿಂಗಳುಗಳಿಂದ ನಡೆಯುತ್ತಿವೆ. ಈಗ ಅದಕ್ಕೆ ನಾವು ಇನ್ನೂ ಹೆಚ್ಚು ಒತ್ತು ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ ಹಾಗೆ 23 ನೇ ತಾರೀಖು ಕುಳಿತು, ಎಲ್ಲಾ ವಿರೋಧ ಪಕ್ಷದ ನಾಯಕರ ಅಭಿಪ್ರಾಯವನ್ನು ತೆಗೆದುಕೊಂಡು, 24 ನೇ ತಾರೀಖು ಅವರ ಸಭೆಯಲ್ಲಿ ಕುಳಿತುಕೊಂಡು ಅಲ್ಲಿ ಏನು ಅಂತಿಮವಾಗಿ ತೀರ್ಮಾನವಾಗುತ್ತದೋ, ಅವರು 1000 ಮೆಗಾವ್ಯಾಟ್ ಘಟಕವನ್ನು ಮಾಡಲು ಅವಕಾಶ ಮಾಡಿಕೊಡುತ್ತಾರೋ ಅಥವಾ ನಾವು ಖರೀದಿಗೆ ಈಗ ಕೇಳಿರುವ 500 ಮೆಗಾವ್ಯಾಟ್‌ನಲ್ಲಿ 500 ಮೆಗಾವ್ಯಾಟ್‌ಅನ್ನೇ ಕೊಡುತ್ತಾರೋ, 300 ಮೆಗಾವ್ಯಾಟ್ ಕೊಡುತ್ತಾರೋ, 400 ಮೆಗಾವ್ಯಾಟ್ ಕೊಡುತ್ತಾರೋ ಎನ್ನುವುದು ನಮಗೆ ಇನ್ನೂ ಯಾವುದೂ ಸ್ಪಷ್ಟವಿಲ್ಲ. ನಮಗೆ ತುಂಬಾ ಅರಿವಿದೆ, ವಿಧಾನಸಭೆ ನಡೆಯುತ್ತಾ ಇರುವಂಥ ಸಂದರ್ಭದಲ್ಲಿ ಯಾವುದೇ ಹೇಳಿಕೆಗಳನ್ನು ಖಂಡಿತಾ ಹೊರಗಡೆ ಕೊಡಬಾರದು ಎಂದು ತೀರ್ಮಾನವಾಗಿರುವಂಥ ಅಂಶ ಎನ್ನುವುದು ನಮಗೆ ಗೊತ್ತಿದೆ. ಹಾಗಾಗಿ ಹೇಳುತ್ತಿದ್ದೇನೆ, ಇನ್ನೂ ಯಾವುದೂ ತೀರ್ಮಾನವಾಗಿಲ್ಲ, ಏನು ಪ್ರಯತ್ನ ನಡೆಯುತ್ತಿದೆ ಎನ್ನುವ ಅಂಶವನ್ನಷ್ಟೇ ಹೇಳಿದ್ದೇವೆ. ಛತ್ತೀಸ್‌ಗಡದ ಮುಖ್ಯಮಂತ್ರಿಗಳ ಹತ್ತಿರ ನಾವು ಹೋಗಿ ಹೊರಗೆ ಬಂದಾಗ, ಪತ್ರಕರ್ತರು ಕೇಳಿದಾಗ ನಾವು ಬಾಯಿ ಮುಚ್ಚಿಕೊಂಡು ಇರುವುದಕ್ಕಾಗುತ್ತದೆಯೇ? ಮಾತುಕತೆ ನಡೆದಿದೆ, ನಾವು ಪ್ರಾರ್ಥನೆ ಮಾಡಿದ್ದೇವೆ, ಅವರೂ ಯೋಚನೆ ಮಾಡುತ್ತಿದ್ದಾರೆ, ಅವರು ಅಲ್ಲಿನ ನಾಯಕರ, ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತಾರೆ ಎಂದು ನಡೆಯುತ್ತಿರುವಂಥ ಅಂಶವನ್ನು ಹೇಳಿದಾಗ ರಾಜ್ಯದ ಜನರಿಗೆ ಮತ್ತು ರೈತರಿಗೆ, ಹೌದು, ನಮ್ಮ ಪರವಾಗಿ ಒಂದಿಷ್ಟು ವಿದ್ಯುತ್ ತರುವ ದಿಕ್ಕಿನಲ್ಲಿ ಸರ್ಕಾರ ಪ್ರಯತ್ನ ಮಾಡುತ್ತಿದೆ ಎನ್ನುವ ವಿಶ್ವಾಸ ಬರುತ್ತದೆ. ಆ ದಿಕ್ಕಿನಲ್ಲಿ ಏನು ಪ್ರಯತ್ನ ನಡೆದಿದೆ ಎನ್ನುವ ಅಂಶವನ್ನು ಹೇಳಿದ್ದೇವೆಯೆ ವಿನಃ ಇನ್ನೂ ಯಾವುದೇ ತೀರ್ಮಾನವಾಗಿಲ್ಲ ಎನ್ನುವ ಅಂಶವನ್ನು ಮತ್ತೊಮ್ಮೆ ವಿರೋಧ ಪಕ್ಷದ ನಾಯಕರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ತೆಗೆದುಕೊಂಡು, 23 ನೇ ತಾರೀಖು ಸಾಯಂಕಾಲ ಐದೂವರೆಗೆ ಸದನದ ಕಾರ್ಯಕಲಾಪಗಳು ಮುಗಿದ ಮೇಲೆ ಪ್ರತಿಪಕ್ಷದ

ನಾಯಕರನ್ನೆಲ್ಲಾ ಕರೆದು, ಹೊಗೇನಕಲ್ ಬಗ್ಗೆ, ನಮಗೆ ರಸಗೊಬ್ಬರವನ್ನು ಕೊಡದೇ ಸಮಸ್ಯೆಯನ್ನು ಎದುರಿಸುತ್ತಿರುವ ಬಗ್ಗೆ ಮತ್ತು ಛತ್ತೀಸ್‌ಗಡದ ಮುಖ್ಯಮಂತ್ರಿಗಳ ಜೊತೆಗೆ ಮಾಡಿಕೊಳ್ಳುತ್ತಿರುವ ಒಡಂಬಡಿಕೆಯ ಬಗ್ಗೆ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ದೃಷ್ಟಿಯಿಂದ 23 ನೇ ತಾರೀಖು ಸಾಯಂಕಾಲ ಐದೂವರೆಗೆ ನಾನು ಮೀಟಿಂಗ್ ಕರೆಯುತ್ತೇನೆ. ತಾವು ಅದರಲ್ಲಿ ಭಾಗವಹಿಸಿ, ಚರ್ಚೆ ಮಾಡಿ, ನಂತರ ಒಂದು ತೀರ್ಮಾನವನ್ನು ತೆಗೆದುಕೊಳ್ಳೋಣ.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಮುಖ್ಯಮಂತ್ರಿಗಳೇ, ತಾವು ಮೀಟಿಂಗ್ ಮಾಡುವುದಕ್ಕಿಂತ ಹೆಚ್ಚಾಗಿ, ಇದುವರೆಗೆ ಏನೇನಾಯಿತು ಎನ್ನುವ ಬಗ್ಗೆ ಸದನಕ್ಕೆ ಸರಿಯಾದ ರೀತಿಯಲ್ಲಿ ಮಾಹಿತಿ ಕೊಡಿ. ಕೇವಲ ಎಲ್ಲೋ ಒಂದು ಕಡೆ ಮೀಟಿಂಗ್ ಮಾಡಿ, ಇಲ್ಲಿರತಕ್ಕಂಥ ಎಲ್ಲರಿಗೂ ಗೊತ್ತಿರದೇ ರೀತಿಯಲ್ಲಿ ಆದರೆ ಏನೂ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು : ದಿನೇಶ್ ಗುಂಡೂರಾವ್‌ರವರೇ, ಈಗಾಗಲೇ ಎಲ್ಲವನ್ನೂ ಹೇಳಿದ್ದಾರೆ.

ಶ್ರೀ ದಿನೇಶ್ ಗುಂಡೂರಾವ್ : ಇದುವರೆಗೆ ಏನೇನಾಯಿತು ಎನ್ನುವ ಬಗ್ಗೆ ಈ ಸಭೆಯಲ್ಲಿ ಒಂದು statement ಕೊಡಲಿ.

ಅಧ್ಯಕ್ಷರು : ಮಾನ್ಯ ಸಚಿವರು ಹೇಳಿದ್ದಾರೆ. ಈಗ ಈ ವಿಷಯವನ್ನು ಮುಕ್ತಾಯಗೊಳಿಸೋಣ.

ಶ್ರೀ ದಿನೇಶ್ ಗುಂಡೂರಾವ್ : ಅವರ point of Order ಗೆ ತಾವು ಒಂದು Ruling ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ತಾವು ಇದನ್ನು ಲಘುವಾಗಿ ತೆಗೆದುಕೊಳ್ಳಬೇಡಿ.

ಅಧ್ಯಕ್ಷರು : ಇಲ್ಲ, ಲಘುವಾಗಿ ತೆಗೆದುಕೊಂಡಿಲ್ಲ.

ಶ್ರೀ ದಿನೇಶ್ ಗುಂಡೂರಾವ್ : ತಾವು Ruling ಕೊಡಿ ಅಧ್ಯಕ್ಷರೇ. ಇವತ್ತು ಪತ್ರಿಕೆಗಳನ್ನು ಓದಿದರೆ, ಇವರು ಏನೋ ಬಹಳ ದೊಡ್ಡ ಸಾಧನೆ ಮಾಡಿಬಿಟ್ಟಿದ್ದಾರೆ ಎನ್ನುವ ರೀತಿಯಲ್ಲಿ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : There is a Rule that, no statement can be made outside the House, when the Legislative Assembly is in session.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾವು ಪ್ರಯತ್ನ ಮಾಡಿದ್ದೇವೆ ಎಂದು ಹೇಳಿದ್ದೇವೆಯೇ ಹೊರತು ನಾವು ಯಾವುದೇ statement ಮಾಡಿಲ್ಲ ಸ್ವಾಮಿ. ನ್ಯಾಯವಾಗಿ ನೋಡಿದರೆ ನೀವು ನಮಗೆ ಅಭಿನಂದನೆಯನ್ನು ಹೇಳಬೇಕಾಗಿತ್ತು. ಈ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿದ್ದೀರಿ, ನಮ್ಮ ಅಧಿಕಾರಿಗಳನ್ನು ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸಿಕೊಟ್ಟಿದ್ದೀರಿ, ಕೇಂದ್ರ ಸರ್ಕಾರ ಕೊಡುತ್ತಿದ್ದುದನ್ನೂ ವಾಪಸ್ಸು ಕಿತ್ತುಕೊಂಡಾಗ ಬೇರೆ ಕಡೆಯಿಂದ ತರುವ ಪ್ರಯತ್ನವನ್ನು ಮಾಡುತ್ತಿದ್ದೀರಿ ಎಂದು ಅಭಿನಂದನೆ ಹೇಳಬೇಕಾಗಿತ್ತು. ಅಂತಿಮ ತೀರ್ಮಾನವಾದ ಮೇಲೆ statement ಮಾಡಬಹುದು. ಈಗ ನಾವು ಏನು

ಮಾಡಿದ್ದೇವೆ? ಹೋಗಿ ಅವರನ್ನು ಭೇಟಿ ಮಾಡಬೇಕೆಂದರೆ, ನಿಮ್ಮನ್ನು ಕೇಳಿ ನಾವು ಹೋಗಿ ಭೇಟಿ ಮಾಡಬೇಕೇನು? ಭೇಟಿ ಮಾಡುವುದಕ್ಕೂ ಯಾರನ್ನಾದರೂ ಕೇಳಬೇಕೇ? ನೀವೇ ಹೇಳಿ ರೇವಣ್ಣನವರೇ, ನೀವೂ ಇಷ್ಟು ವರ್ಷಗಳ ಕಾಲ power minster ಆಗಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಗಳೇ, ನಾವು ಪೇಪರ್ ಅನ್ನು ನೋಡಿಯಾದರೂ ಇಲ್ಲಿ ನಿಮ್ಮನ್ನು ಕೇಳಬೇಕು, ಇಲ್ಲವೆಂದರೆ ಟಿ.ವಿ.ಯಲ್ಲಿ ನೋಡಿಯಾದರೂ ಕೇಳಬೇಕು. ನೀವಂತೂ ಹೇಳುವುದಲ್ಲವಲ್ಲ. ನೀವು ಹೇಳಲಿಲ್ಲ ಎಂದರೆ ನಾವು ನಿಮ್ಮನ್ನು ಎಲ್ಲಿ ಕೇಳುವುದು? ಇಲ್ಲಿಯೇ ಕೇಳಬೇಕಲ್ಲವೇ?

ಶ್ರೀ ಕೆ. ಎಸ್. ಈಶ್ವರಪ್ಪ : ನಾವು ಏನು ಮಾಡುತ್ತಿದ್ದೇವೆ ಎನ್ನುವುದನ್ನು ಪೇಪರ್ ಮುಖಾಂತರ, ಟಿ.ವಿ. ಮುಖಾಂತರ ತಿಳಿದುಕೊಳ್ಳುವುದಕ್ಕೋಸ್ಕರವೇ ಅವರಿಗೆ ಹೇಳಿದ್ದೇವೆ. ಇನ್ನೂ ತೀರ್ಮಾನವಾಗಿಲ್ಲ. ತೀರ್ಮಾನವಾಗಿರುವ ವಿಚಾರವನ್ನು ವಿಧಾನಸಭೆಯಲ್ಲಿ ಹೇಳುತ್ತೇವೆ. ಚರ್ಚೆಯಾಗುತ್ತಿರುವುದು, ನಡೆಯುತ್ತಿರುವಂಥ ಅಂಶ, ರಾಜ್ಯದಲ್ಲಿ ರಾಜ್ಯ ಸರ್ಕಾರ ರೈತರ ಪರವಾಗಿ, ನಾಗರೀಕರ ಪರವಾಗಿ ಏನು ಚಟುವಟಿಕೆಗಳನ್ನು ಮಾಡುತ್ತಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಟಿ.ವಿ. ಮಾಧ್ಯಮದವರಿಗೂ ಅಧಿಕಾರವಿರುತ್ತದೆ, ಪತ್ರಿಕಾ ಮಾಧ್ಯಮದವರಿಗೂ ಅಧಿಕಾರವಿರುತ್ತದೆ. ಹಾಗಾಗಿ ಅವರ ಮುಖಾಂತರ ರಾಜ್ಯದ ಜನತೆಗೆ ತಿಳಿಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಅಂತಿಮವಾಗಿ ಇನ್ನೂ ತೀರ್ಮಾನವಾಗಿಲ್ಲ. ಆಗಿದ್ದರೆ ನಾವು ಖಂಡಿತವಾಗಿ ಇಲ್ಲೇ ಹೇಳುತ್ತಿದ್ದೆವು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆಯಿತು, ನೀವು ನಿಮ್ಮ ಮಾತನ್ನು ಹೇಳಿದಿರಲ್ಲ, ಜನರಿಗೆ ತಿಳಿಸಬೇಕು ಎಂದು ಹೇಳಿದಿರಲ್ಲವೇ, ಆಯಿತು. ಆದರೆ, ಇದರಲ್ಲಿ ಹೇಗೆ ಬಂದಿದೆ? ಈ ಪೇಪರ್‌ನಲ್ಲಿ authentic ಆಗಿ ಬಂದಿದೆ. ಅದನ್ನು ನೀವು deny ಮಾಡಿದಿರೇ, ಇಲ್ಲ. ನನ್ನ ಮೂಲವಾದಂಥ ಪ್ರಶ್ನೆ ಏನೆಂದರೆ, Session ನಡೆಯುತ್ತಿರುವಾಗ, ಹೊರಗಡೆ policy matter statement ಮಾಡಬಾರದು ಅನ್ನತಕ್ಕಂಥಾದ್ದು ಇದೆ. ಅದಕ್ಕೆ ನೀವು ಏನು ಹೇಳುತ್ತೀರಿ? This is my point of order. ಮುಖ್ಯಮಂತ್ರಿಗಳಿಗೆ, ಈಶ್ವರಪ್ಪನವರಿಗೆ ಅಷ್ಟು ಆಸಕ್ತಿ ಇದ್ದರೆ, ಪೇಪರ್‌ನಲ್ಲಿ ಬಂದಿದ್ದು ಸರಿಯಿಲ್ಲವೆಂದರೆ, are you going to move a privilege motion against the newspaper? ಇಂಥ ನಡವಳಿಕೆಗಳು ಸದನದಲ್ಲಿ ನಡೆದಿವೆ. ನಾವು ಇನ್ನು ಮೇಲೆ ಈ ರೀತಿ ಮಾಡುವುದಿಲ್ಲ ಎನ್ನುವುದನ್ನೂ ನೀವು ಹೇಳುವುದಿಲ್ಲ, ಈ ರೀತಿ ಆಗಿದ್ದು ಸರಿಯಲ್ಲ, ಇನ್ನು ಮೇಲೆ ನಾವು ಸುಧಾರಣೆ ಮಾಡಿಕೊಂಡು, ಇಲ್ಲೇ statement ಮಾಡುತ್ತೇವೆ ಎನ್ನುವುದನ್ನೂ ಹೇಳುತ್ತಿಲ್ಲ, ಇಲ್ಲವೆಂದರೆ ನಾವು ಹೇಳಿದ್ದು ಸರಿ, ನಾವು ತಿಳಿಸಿದ್ದು ಸರಿ, ನಾವು ಜನತೆಗೆ ತಿಳಿಸಬೇಕಾಗುತ್ತದೆ ಎಂದರೆ, ನೀವು ತಿಳಿಸಬೇಕಾಗುತ್ತದೆ ಎನ್ನುವುದು ನಮಗೆ ಹೇಗೆ ಗೊತ್ತಾಗುತ್ತದೆ?

ಶ್ರೀ ಕೆ. ಎಸ್. ಈಶ್ವರಪ್ಪ : ರಾಜ್ಯದಲ್ಲಿ ವಿದ್ಯುತ್ ಅಭಾವ ಇರುವಂಥ ಸಂದರ್ಭದಲ್ಲಿ ನಾವು ಛತ್ತೀಸ್‌ಗಡಕ್ಕೆ ಹೋಗುತ್ತೇವೆ, ಖಾಸಗಿಯವರ ಹತ್ತಿರ ಪ್ರಯತ್ನ ನಡೆಸುತ್ತೇವೆ, ಎಲ್ಲೆಲ್ಲಿ, ಏನೇನೋ

ಪ್ರಯತ್ನಗಳು ನಡೆಯುತ್ತಿರುವಂಥ ಸಂದರ್ಭದಲ್ಲಿ ಪತ್ರಿಕೆಯವರು, ಟಿ.ವಿ.ಯವರು ಕೇಳಿದಾಗ, ನಾವು ಏನು ಪ್ರಯತ್ನಗಳನ್ನು ನಡೆಸುತ್ತಿದ್ದೇವೆ ಎನ್ನುವುದನ್ನು ನಾವು ಹೇಳುವವರೇ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಅಲ್ಲಿಗೆಲ್ಲಾ ಮಂತ್ರಿ ಎಂದು ಹೋಗುತ್ತೀರಿ, ಈಶ್ವರಪ್ಪ ಎಂದು ಅಲ್ಲ. We have got every right to get the information.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ನೀವು ಈ ರೀತಿ ಮೊಂಡುತನವನ್ನೇ ಮಾಡಿದರೆ, ನಿಮಗೆ ರಾಜ್ಯದ ಬಗ್ಗೆ ಗೌರವವೇ ಇಲ್ಲವಲ್ಲ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೇ, ಅವರು ಮಾತನಾಡುತ್ತಿರತಕ್ಕಂಥ ರೀತಿಯನ್ನು ನೋಡಿದರೆ, ಅವರಿಗೆ ಈ ಸದನದ ಬಗ್ಗೆ ಗೌರವ ಇಲ್ಲ, ನಾವು ಮಾಡಿದ್ದೇ ಸರಿ, ನಾವು ಹೇಳಿದ್ದೇ ಸರಿ ಈ ರೀತಿ ಅವರು ಮಾತನಾಡುತ್ತಿದ್ದಾರೆ. ತಾವು ದಯವಿಟ್ಟು ಇದನ್ನು...

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಸಚಿವರೇ, ತಾವು ವಿರೋಧಪಕ್ಷದಲ್ಲಿಲ್ಲ. ಆಡಳಿತ ಪಕ್ಷದಲ್ಲಿದ್ದೀರಿ. ತಾವು ತಮ್ಮ ವರ್ತನೆಯನ್ನು ಸರಿಮಾಡಿಕೊಳ್ಳಿ. ಈ ರೀತಿ ಮಾತನಾಡಬೇಡಿ.

ಶ್ರೀ ಕೆ. ಎಸ್. ಈಶ್ವರಪ್ಪ : ನಾನು ಮತ್ತೆ ಹೇಳುತ್ತೇನೆ. ಈ ರಾಜ್ಯದ ಜನರ ಹಿತದೃಷ್ಟಿಯಿಂದ ನಾವು ಏನೇನು ಪ್ರಯತ್ನಗಳನ್ನು ನಡೆಸುತ್ತಿದ್ದೇವೆ ಎನ್ನುವಂಥ ಅಂಶಗಳನ್ನು, ಸಂಬಂಧಪಟ್ಟ ಜಾಗಗಳಿಗೆ ಹೋದಾಗ ಪತ್ರಕರ್ತರು, ಟಿ.ವಿ.ಯವರು ನಮ್ಮನ್ನು ಕೇಳಿದಾಗ, ನಾವು ಏನೂ ಮಾಡುತ್ತಿಲ್ಲ, ನಾವು ಏನೂ ಹೇಳುವುದಿಲ್ಲ ಎಂದು ಹೇಳಿದರೆ ಇದಕ್ಕೆ ಅರ್ಥವಿಲ್ಲ ಎಂದು ನಾನು ಭಾವಿಸುತ್ತೇನೆ. ಸ್ವತಃ ವಿರೋಧ ಪಕ್ಷದ ನಾಯಕರು,...

ಶ್ರೀ ಮಲ್ಲಿಕಾರ್ಜುನ ಖರ್ಗೆ : Rules ತೆಗೆದು ನಂತರ ನೀವು statement ಮಾಡಿ. Rules ಅಸ್ತಿತ್ವದಲ್ಲಿಲ್ಲ ಎಂದು ಹೇಳಿ ನಂತರ ನೀವು ಮಾತನಾಡಿ.

ಶ್ರೀ ಕೆ. ಎಸ್. ಈಶ್ವರಪ್ಪ : ಇನ್ನೂ ತೀರ್ಮಾನವಾಗಿಲ್ಲ. ಮಾತುಕತೆಯಾಗುತ್ತಿರುವುದನ್ನು ಹೇಳಬಾರದು ಎಂದು ನಿಮ್ಮ Rulesನಲ್ಲಿ ಇದೆಯೋ, ಏನೋ ನನಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ವಿರೋಧಪಕ್ಷದ ನಾಯಕರು ಹೇಳಲಿ, ಮಾತುಕತೆ ನಡೆಯುತ್ತಿರುವುದನ್ನೂ ಹೇಳಬಾರದು ಎಂದು Rules ನಲ್ಲಿ ಇದೆಯೇನೋ ನನಗೆ ಗೊತ್ತಿಲ್ಲ. ಅದನ್ನು ನನಗೆ ಸ್ಪಷ್ಟ ಮಾಡಿ. ನಾನು ನಿಮ್ಮಷ್ಟು ಕಾನೂನು ತಜ್ಞನಲ್ಲ. ಇಲ್ಲಿ ನಡೆಯುತ್ತಾ ಇರುವಂಥ ಮಾತುಕತೆಯ

ಬಗ್ಗೆ ಯಾರಾದರೂ ಕೇಳಿದಾಗ ಹೇಳಬೇಕೋ ಬೇಡವೋ ಎನ್ನುವ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ನನಗೆ ತಿಳುವಳಿಕೆ ಕೊಡಬೇಕು. ವಿರೋಧ ಪಕ್ಷದ ನಾಯಕರೇ, ನಾನು ನಿಮ್ಮಷ್ಟು senior ಅಲ್ಲ. ದಯವಿಟ್ಟು ನನಗೆ ತಿಳುವಳಿಕೆ ಕೊಡಿ. ನಾವು ಛತ್ತೀಸ್‌ಗಡದ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಮಾತುಕತೆ ಮಾಡುತ್ತೇವೆ, ಪ್ರಯತ್ನವನ್ನು ನಡೆಸುತ್ತಾ ಇದ್ದೇವೆ, ಅಧಿಕಾರಿಗಳೂ ಹೋಗಿ, ಅವರೂ ಭೇಟಿ ಮಾಡಿ, ಮುಖ್ಯಮಂತ್ರಿಗಳೂ ಭೇಟಿ ಮಾಡಿ ಬರುತ್ತಿರುವಂಥ ಸಂದರ್ಭದಲ್ಲಿ ನೀವು ಏನು ಮಾಡುತ್ತಿದ್ದೀರಿ ಎಂದು ಕೇಳಿದಂಥ ಸಂದರ್ಭದಲ್ಲಿ ಈ ರೀತಿಯ ವಿಚಾರಗಳು ನಡೆಯುತ್ತಿವೆ ಎನ್ನುವ ಅಂಶವನ್ನೂ ಕೂಡ ಯಾವುದೇ ಕಾರಣಕ್ಕೂ ಹೇಳಬಾರದು ಎಂದು ಕಾನೂನು ಹೇಳುತ್ತದೆ ಎಂದು ನನಗೇನೂ ಅನ್ನಿಸುವುದಿಲ್ಲ. ನಾನೇನು ಕಾನೂನು ತಜ್ಞ ಅಲ್ಲ. ಆದರೂ ಕೂಡ, ನಿಮಗೆ ನಾನು ಇಲ್ಲಿ ಸ್ಪಷ್ಟ ಮಾಡುತ್ತೇನೆ, ರಸಗೊಬ್ಬರದ ಬಗ್ಗೆ ಚರ್ಚೆ ಮಾಡೋಣ ಬನ್ನಿ ಎಂದು ಮಾನ್ಯ ಮುಖ್ಯಮಂತ್ರಿಗಳು ಇವರನ್ನೆಲ್ಲಾ ಕರೆದರು, ಇವರು ಅಲ್ಲಿಗೆ ಬರುವುದಕ್ಕೆ ತಯಾರಿಲ್ಲ, ಅಲ್ಲಿ ರಾಜಕೀಯ ಮಾಡಿಕೊಂಡು ಹೊರಟರು, ಈಗ ಇಲ್ಲೂ ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ನಾಗಮಾರಪಲ್ಲಿಯವರೆ, ಕುಳಿತುಕೊಳ್ಳಿ. (ಗೊಂದಲ) Please, ಗುತ್ತೇದಾರ್‌ರವರೆ, ಹೆಗಡೆಯವರೆ ಕುಳಿತುಕೊಳ್ಳಿ. (ಗೊಂದಲ) ರೇವಣ್ಣನವರೆ, ಕುಳಿತುಕೊಳ್ಳಿ. (ಗೊಂದಲ) ಧ್ರುವ ನಾರಾಯಣ್‌ರವರೆ, ಕುಳಿತುಕೊಳ್ಳಿ.

(ಗೊಂದಲ)

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನೀವು Ruling ಕೊಡಿ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ. ಏಕೆ ಅವಸರ ಮಾಡುತ್ತೀರಿ? ಕೊಡುತ್ತೇನೆ, ಕುಳಿತುಕೊಳ್ಳಿ.

(ಗೊಂದಲ)

ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : Ruling ಕೊಡಬೇಕಾಗಿತ್ತು. ಸದನ ಅಂದರೆ ಆಟವಾಡುವುದಕ್ಕೆ ಬಂದಿದ್ದೇವೆಯೇ ಇಲ್ಲಿ?

(ಗೊಂದಲ)

ಅಧ್ಯಕ್ಷರು : ಶರಣ ಪ್ರಕಾಶ್‌ರವರೆ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : .... ನಾವು ಮಾಡುತ್ತಿರುವ ಕೆಲಸವನ್ನು ನೋಡಿ ಮೆಚ್ಚಬೇಕು.

(ಗೊಂದಲ)

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮೆಚ್ಚುತ್ತೇವೆ. (ಗೊಂದಲ) ನೀವು ಹೇಳಿ. Rules follow ಮಾಡಿ. (ಗೊಂದಲ) ಒಳ್ಳೆಯ ಕೆಲಸವೆಂದರೆ, Rules ಬಿಟ್ಟು ಮಾಡುವುದಕ್ಕಾಗುವುದಿಲ್ಲ. (ಗೊಂದಲ) Everything has to go by Rules. (ಗೊಂದಲ) Rules ಎಲ್ಲವನ್ನೂ ಗಾಳಿಗೆ ತೂರಿ ನಿಮ್ಮ ಮನಸ್ಸಿಗೆ ಬಂದ ಹಾಗೆ ಮಾಡುತ್ತೀರಾ?

(ಗೊಂದಲ)

ಅಧ್ಯಕ್ಷರು : ರೇವಣ್ಣನವರು ಏನೋ ಮಾತನಾಡುತ್ತಿದ್ದಾರೆ. ಮಾತನಾಡಲಿ. (ಗೊಂದಲ) ನಾರಾಯಣಸ್ವಾಮಿಯವರೇ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ : ಈ ಪದ್ಧತಿ ಸರಿ ಇಲ್ಲ. ಇದು ಯಾವ ನಡವಳಿಕೆ?

(ಗೊಂದಲ)

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಆನೇಕಲ್‌ನಲ್ಲಿ ಬಸ್ಸು ಸುಟ್ಟು ಹಾಕಿದ ನಡವಳಿಕೆಯನ್ನು ರಾಜ್ಯದ ಜನತೆ ನೋಡಿದ್ದಾರೆ. ಆನೇಕಲ್‌ನಲ್ಲಿ ಯಾವುದಕ್ಕೆ ಕಲ್ಲು ಹೊಡೆದಿರಿ? ನಿಮ್ಮ ನಡವಳಿಕೆ ಗೊತ್ತಿದೆ ಬಿಡಿ. (ಗೊಂದಲ) ನಿಮ್ಮ ಉಪದೇಶ ಕೇಳುವುದಕ್ಕೆ ಇಲ್ಲಿ ಬಂದಿಲ್ಲ. Rules ಪಾಲನೆಯಾಗುತ್ತಿಲ್ಲ, ಅದಕ್ಕೆ we are protecting the interest of the House.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೇ, ಆಡಳಿತ ಪಕ್ಷದ ಸದಸ್ಯರು, 'ಮೊಸರಿನಲ್ಲಿ ಕಲ್ಲು ಹುಡುಕುವುದಕ್ಕೆ ಹೊರಟಿದ್ದಾರೆಂದು' ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳೂ ಸಹ, 'ನಾನು ದೀರ್ಘಕಾಲ ಇಂಧನ ಮಂತ್ರಿಯಾಗಿದ್ದೆ' ಎಂದು ಹೇಳಿದರು. ಅಂದರೆ ನಾನು ಇಂಧನ ಮಂತ್ರಿಯಾಗಿದ್ದ ಕಾಲದಲ್ಲಿ ಏನೇನು ಆಯಿತು ಎನ್ನುವುದಕ್ಕೆ ಬೇಕಾದರೆ ಒಂದು ದಿವಸ discussion ಗೆ ಇಡಿ.

ಶ್ರೀ ಕೆ. ಎಸ್. ಈಶ್ವರಪ್ಪ : ಇಡಿ. ಖಂಡಿತ ಚರ್ಚೆ ಮಾಡೋಣ.

ಶ್ರೀ ಹೆಚ್. ಡಿ. ರೇವಣ್ಣ : ಇಂಧನ ವಿಚಾರವಾಗಿ ನಾನು ಅವತ್ತಿನಿಂದಲೂ ಹೇಳುತ್ತಿದ್ದೇನೆ. ಇವತ್ತಲ್ಲ ಹೇಳುತ್ತಿರುವುದು, ಉದಾಸಿಯವರೆ, ನಾನು ಇಂಧನ ಸಚಿವನಾಗಿದ್ದಾಗಲೂ ಹೇಳಿದ್ದೇನೆ. ಅಂದು ಕ್ಯಾಬಿನೆಟ್‌ನಲ್ಲಿ ಹೇಳಿದ್ದೇನೆ. ಇಂಧನ ಸಚಿವನಾಗಿ 'ನನಗೆ ಬೇಡ, ಸಾಹೇಬರ ಅಧ್ಯಕ್ಷತೆಯಲ್ಲಿ ತೀರ್ಮಾನ ಮಾಡಿ, ಈ ರಾಜ್ಯಕ್ಕೆ 25 ವರ್ಷಕ್ಕೆ ಏನು ಬೇಕೆಂದು ಒಂದು ಕಮಿಟಿ' ಮಾಡಿದೆವು. ಕಮಿಟಿ ಮಾಡಿದ ಒಂದು ವಾರಕ್ಕೇ ಬೇಡವೆಂದು ಸಾಹೇಬರು ಅಂದರೆ ಈಗಿನ ಸನ್ಮಾನ್ಯ ಮುಖ್ಯಮಂತ್ರಿಯವರು ಅಂದು ಹೇಳಿದರು. ಇದೊಂದು ಕಡೆ. ಏಕೆಂದರೆ, KPCL ನಲ್ಲಿ ಇದ್ದ ಕಾಲದಲ್ಲಿ 4500 ಮೆ.ವ್ಯಾ. ಉತ್ಪಾದನೆ

ಮಾಡುವುದಕ್ಕೆ ನಿಮಗೆ ಪೂರ್ತಿ ಕಾರ್ಯಾದೇಶ ಕೊಡಿಸಿದ್ದೇನೆ. ಇಲ್ಲಿಯವರೆಗೇನೇನಾಗಿದೆ ಎಂದು ಸಭೆಗೆ ಹೇಳಿ ನೋಡೋಣ ಮುಂದಿನ 25 ವರ್ಷಗಳಿಗೆ ಏನಾಗಬೇಕೆನ್ನುವುದನ್ನು 10,000 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡಬೇಕೆನ್ನುವ ಬಗ್ಗೆ KPCL ನಲ್ಲಿ ಯೋಜನೆ ತಯಾರು ಮಾಡಿಟ್ಟಿದ್ದೇವೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಹೇಳಿ? ಒರಿಸ್ಸಾ Chief Minister ರವರನ್ನು ಮತ್ತು ಛತ್ತೀಸ್‌ಗಡದ Chief Minister ರವರನ್ನು ಒರಿಸ್ಸಾದಲ್ಲಿ plant ಆಗಬೇಕೆಂದು ಒರಿಸ್ಸಾದಲ್ಲಿ, ಛತ್ತೀಸ್‌ಗಡದಲ್ಲಿ plant ಆಗಬೇಕೆಂದು ಎರಡು ಸಾರಿ ದೆಹಲಿಯಲ್ಲಿ ಭೇಟಿಯಾಗಿದ್ದೇನೆ. ಏಕೆಂದರೆ, ನಾನೇ ಇಂಧನ ಸಚಿವನಾಗಿ 3 ವರ್ಷ ದೀರ್ಘ ಕಾಲ ಇದ್ದುಬಿಟ್ಟೆ ಎಂದರೆ ಮಜಾ ಮಾಡಿಕೊಂಡು ಬಂದಿಲ್ಲ. ಹಿಂದಿನ ಸರ್ಕಾರದಲ್ಲಿ ಏನೂ ಮಾಡಿಲ್ಲ, ಈಗ ನಾವು ಬಂದ ಮೇಲೆ ಎಲ್ಲಾ ರೆಡಿ ಮಾಡಿ 2 ಸಾವಿರ ಮೆ.ವ್ಯಾ. ನಾಳೆ ಬೆಳಿಗ್ಗೆ ಪಾರ್ಸಲ್ ಬರುತ್ತಿದೆ ಎನ್ನುವ ಸನ್ನಿವೇಶಕ್ಕೆ ಹೋಗುವುದು ಬೇಡ. ಈಗ ನೀವು ಹೇಳುತ್ತಿದ್ದೀರಲ್ಲ, ಬೆಳಿಗ್ಗೆ ಹಿಂದೆಯಿಂದ ಪಾರ್ಸಲ್ ಬರುತ್ತದೆ, ಕೇಂದ್ರ ಸರ್ಕಾರ 100 ಮೆ.ವ್ಯಾ. ತೆಗೆದಿದೆ ಎಂದು ಹೇಳಿದಿರಲ್ಲ. ಯಾವ ಉದ್ದೇಶಕ್ಕೆ ತೆಗೆದಿದೆ ಎಂದು ಹೇಳಿ. ಏನು ಮಾಡಬೇಕೆನ್ನುವುದನ್ನು KPTCL MD ಯವರಿರಬಹುದು, Energy Secretary ಯವರಿರಬಹುದು ಅವರ ಜೊತೆ ಮೀಟಿಂಗ್ ಮಾಡಿ ಕೇಳಿ. ಯಾವ್ಯಾವ ರೀತಿ ಕೇಂದ್ರ ಸರ್ಕಾರದಿಂದ ಇಂಧನವನ್ನು ಯಾವ ರೀತಿ ಖರೀದಿ ಮಾಡಬೇಕೆನ್ನುವುದರ ಬಗ್ಗೆ ಒಂದು ನಿಯಮವಿದೆ. ಏಕೆಂದರೆ, ರಾತ್ರಿ ಟೈಮ್‌ನಲ್ಲಿ ಎಲ್ಲ ವಾಚ್ ಮಾಡಬೇಕಾಗುತ್ತದೆ. ಸುಮ್ಮನೆ ಅದೆಲ್ಲಾ ಹೇಳದೇ, ಸುಮ್ಮನೆ ಇದ್ದು, ಕೇವಲ 40 ದಿವಸಗಳಲ್ಲಿ ಬಂದು ಕುಳಿತುಕೊಂಡು ವಿರೋಧ ಪಕ್ಷದವರನ್ನು ಬಯ್ದುಕೊಳ್ಳುವುದಾದರೆ ಬಯ್ದುಕೊಳ್ಳಿ. ನನ್ನದೇನೂ ಅಭ್ಯಂತರವಿಲ್ಲ. ಒಂದು ದಿವಸ ಚರ್ಚೆಗೆ ಇಡಿ. ಬೇಕಾದರೆ, ಕಳೆದ ಮೂರು ವರ್ಷ 6 ತಿಂಗಳಲ್ಲಿ ಏನು ಕೆಲಸವಾಗಿದೆ ಎಂದು ಒಂದು ದಿವಸ ಪೂರ್ಣ ಇಂಧನ ಸಲುವಾಗಿಯೇ ಚರ್ಚೆಗೆ ಇಡಿ. ನಾನು ಕೆಲಸವನ್ನೇ ಮಾಡಿಲ್ಲವೆಂದರೆ ಈ ರಾಜಕೀಯ ಜೀವನದಿಂದ ನಿವೃತ್ತಿಯಾಗುತ್ತೇನೆ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಖಂಡಿತವಾಗಿ, ಈ ಸಭೆಯಲ್ಲಿ ಮಾನ್ಯ ರೇವಣ್ಣನವರು ಹೇಳಿದ ಹಾಗೆ, ಇವತ್ತು ವಿದ್ಯುತ್ ಅಭಾವವಿರುವ ಸಂದರ್ಭದಲ್ಲಿ ಒಂದು ದಿನವಲ್ಲ, ಎರಡು ದಿನ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ. ನೀವು ನೋಟೀಸ್ ಕೊಡುತ್ತೀರೋ ಅಥವಾ ನಾವೇ ಮಾಡಬೇಕೋ ಪ್ರಯತ್ನ ಮಾಡೋಣ. ನೀವೇ ಮಾಡಿ. ನಿಮಗೇನೇನು ಬೇಕೋ ಎಲ್ಲವನ್ನೂ ಒದಗಿಸುವುದಕ್ಕೆ ನಾವು ತಯಾರಿದ್ದೇವೆ. ಈಗ ಏನು ನಡೆದಿದೆ, ಈಗಿನ ಪರಿಸ್ಥಿತಿ ಏನು? ಹಿಂದೆ ಏನೇನು ನಡೆದಿದೆ? ಮುಂದೆ ನಾವೇನು ಮಾಡಬೇಕೆಂದಿದ್ದೇವೆ? ಎಲ್ಲವನ್ನೂ ನಿಮ್ಮ ಮುಂದಿಡುತ್ತೇವೆ. ಅದರಲ್ಲೇನೂ ಪ್ರಶ್ನೆಯಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ : ಸಭಾಧ್ಯಕ್ಷರೆ, ಇವತ್ತೇ ಒಂದು ದಿನಾಂಕವನ್ನು ನಿಗದಿಪಡಿಸಿ.

ಅಧ್ಯಕ್ಷರು : ತಾವೊಂದು ನೋಟೀಸ್ ಕೊಡಿ.

ಶ್ರೀ ಕೆ. ಎಸ್. ಈಶ್ವರಪ್ಪ : ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಏನು point of order ಪ್ರಸ್ತಾಪ ಮಾಡಿದರು. ಸದನ ನಡೆಯುವ ಸಂದರ್ಭದಲ್ಲಿ ಯಾವುದೇ policy decision ಬಗ್ಗೆ ಸರ್ಕಾರ ಯಾವುದೇ ನಿರ್ಣಯವನ್ನು ಕೈಗೊಂಡ ಸಂದರ್ಭದಲ್ಲಿ ಅದನ್ನು ಸದನದ ಹೊರಗಡೆ ಹೇಳದೇ ಸದನ ನಡೆಯುವ ಸಂದರ್ಭದಲ್ಲಿ ಸದನದಲ್ಲಿಯೇ ಅದನ್ನು ಪ್ರಕಟ ಮಾಡಬೇಕೆನ್ನುವುಂಥದ್ದೇನಿದೆ, ಅದು ಹಿಂದೆ ಎಲ್ಲ ಕಡೆ ನಡೆದುಕೊಂಡು ಬಂದಿದೆ. ಅದರ ಬಗ್ಗೆ ಎರಡು ಪ್ರಶ್ನೆ ಇಲ್ಲ. Particularly, ಮಾನ್ಯ ವಿರೋಧ ಪಕ್ಷದ ನಾಯಕರು, ವಿದ್ಯುತ್ ಖರೀದಿ ಬಗ್ಗೆ ಛತ್ತೀಸ್‌ಗಡದ ಮುಖ್ಯಮಂತ್ರಿಯವರಾದ ರಮಣಸಿಂಗ್‌ರವರ ಜೊತೆ ಮಾನ್ಯ ಮುಖ್ಯಮಂತ್ರಿಗಳು, ತಾವು ಮಾತುಕತೆ ಮಾಡಿದ ಬಗ್ಗೆ ಮತ್ತು ಇನ್ನಿತರ plant ಅನ್ನು ಅಲ್ಲಿ ಹೊಸದಾಗಿ ಹಾಕುವ ಬಗ್ಗೆ ಇರಬಹುದು, ಇದರ ಬಗ್ಗೆ ತಾವು ಈಗಾಗಲೇ ನಿರ್ಣಯವನ್ನು ಕೈಗೊಂಡಿದ್ದೀರಿ, ಆ ರೀತಿ ಪತ್ರಿಕೆಯಲ್ಲಿ ಬಂದಿದೆ ಎನ್ನುವ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಆದರೆ, ಮಾನ್ಯ ಮುಖ್ಯಮಂತ್ರಿಗಳು, ಇಂಧನ ಸಚಿವರಾದ ಈಶ್ವರಪ್ಪನವರು ಮಾತನಾಡುತ್ತಾ, ಆ ರೀತಿ ನಾವು ನಿರ್ಣಯವನ್ನು ಕೈಗೊಂಡಿಲ್ಲ, ಅದರ ಬಗ್ಗೆ ಚರ್ಚೆ ನಡೆಯುತ್ತಿದೆ, ಅಧಿಕಾರಿಗಳು ಅಲ್ಲಿಗೆ ಹೋಗಿದ್ದಾರೆ ಎಂದು ಈ ರೀತಿ ಹೇಳಿದರು. ಅಂದರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ, ಇನ್ನೂ ನಾವು ಯಾವುದೇ ರೀತಿಯ policy decision ತೆಗೆದುಕೊಂಡಿಲ್ಲವೆನ್ನುವ ಮಾತನ್ನು ಸರ್ಕಾರದ ಪರವಾಗಿ ಹೇಳಿದ್ದಾರೆ. ಹೀಗಾಗಿ, ಇವತ್ತು ಪತ್ರಿಕೆಯಲ್ಲಿ ಬಂದದ್ದು ಸರಿ ಇಲ್ಲವೆಂದೂ ಸರ್ಕಾರದ ಪರವಾಗಿ ಹೇಳಿದ್ದಾರೆ. ಈ policy decision ಪ್ರಕಟವಾಗಿಲ್ಲವೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಮುಂದೆ ಬರುವ ದಿವಸಗಳಲ್ಲಿ ಯಾವುದೇ ರೀತಿಯಾದಂಥ policy decision ತೆಗೆದುಕೊಳ್ಳುವ ಸಂದರ್ಭದಲ್ಲಿ ಸದನ ನಡೆಯುವ ಸಂದರ್ಭದಲ್ಲಿ ಅದನ್ನು ಸದನದಲ್ಲಿಯೇ ಪ್ರಕಟ ಮಾಡುವಂಥದ್ದಾಗಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು 23 ನೇ ತಾರೀಖಿಗೆ ಎಲ್ಲ ಪ್ರತಿಪಕ್ಷದ ನಾಯಕರ ಸಭೆಯನ್ನೂ ಕರೆದಿದ್ದಾರೆ. ಅದರಲ್ಲಿ ಇದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಬಹುದು ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

12-30 pm

3. ಈಗ ಗಮನ ಸೆಳೆಯುವ ಸೂಚನೆಗಳು.

ವಿಷಯ : ಚಿಕ್ಕಬಳ್ಳಾಪುರ ಜಿಲ್ಲೆಯ ಭಾಗಗಳಲ್ಲಿ ವಿದ್ಯುತ್ ಸರಬರಾಜಿನ ಅವ್ಯವಸ್ಥೆಯಿಂದ ವ್ಯವಸಾಯ ಹಾಗೂ ರೇಷ್ಮೆ ಕೈಗಾರಿಕಾ ಉದ್ದಿಮೆಗಳಿಗೆ ವಿದ್ಯುತ್ ಅಭಾವದಿಂದ ಉಂಟಾಗಿರುವ ತೊಂದರೆ ಬಗ್ಗೆ.

ಶ್ರೀ ಎ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆಯ ಭಾಗಗಳಲ್ಲಿ ವಿದ್ಯುತ್ ಸರಬರಾಜಿನ ಅವ್ಯವಸ್ಥೆಯಿಂದ ವ್ಯವಸಾಯ ಹಾಗೂ ರೇಷ್ಮೆ ಕೈಗಾರಿಕಾ ಉದ್ದಿಮೆಗಳಿಗೆ ವಿದ್ಯುತ್ ಅಭಾವದಿಂದ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆಯುತ್ತೇನೆ.